ಅಪರಂಜಿ

ಡಿಸೆಂಬರ್ 97

ತಿಳಿನಗೆಯ ಕಾರಂಜಿ



ಪ್ರಕಾಶ್

ಭೂಪಿ

ನಾಗೂಶ್ರೀ ಸೂರಿ

ಆನಂದ

ಬಿ.ಪಿ. ಕೋಟಿ ಬೆಂಗ್ರ

ಬೇಲೂರು ರಾಮಮೂರ್ತಿ

ಎಂ.ಎನ್.ಕೆ.

ಬಾಗೂರು ಚಂದ್ರು

ಎಚ್. ಗೋಪಾಲಕೃಷ್ಣ

ಶಿವು

ಬಿಡಿ ಪ್ರತಿ : ರೂ. 3.50



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 15 ಡಿಸೆಂಬರ್ '97 ಸಂಚಿಕೆ-3

ಅಪರಂಜಿ ಕಿಡಿ	ಪ್ರಕಾಶ್	3
ಕದನ ಕೋಲಾಹಲ	ಭೂಷಿ	5
ಇಷ್ಟಾರ್ಥ ಸಿದ್ಧಿ	ನಾಗೂಶ್ರೀ ಸೂರಿ	13
ಆಲೋಯನ್ಸ್ ಆಸೆ	ಆನಂದ	19
ಸುಳ್ಳೋಪಾಖ್ಯಾನ	ಬಿ. ಪಿ. ಕೋಡಿ ಬೆಂಗ್ರೆ	21
ಆಣಕವಾಡು	ಬೇಲೂರು ರಾಮಮೂರ್ತಿ	23
ಮೇಡ್ ಫಾರ್ ಈಚ್ ಅದರ್	ಎಂ. ಎಸ್. ಕೆ.	25
ಸುದ್ದಿ, ರದ್ದಿ, ಲದ್ದಿ	ಬಾಗೂರು ಚಂದ್ರು	27
ರಿಟೈರ್‌ಮೆಂಟು	ಎಚ್. ಗೋಪಾಲಕೃಷ್ಣ	30
ಮದುವೆ ಮಾಡ್ತೀರೇನು?	ಶಿವು	33

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 15 ಡಿಸೆಂಬರ್ 97 ಸಂಚಿಕೆ-3

ಭೂಃ, ಭುವಃ, ಸುವಃ ಎನ್ನುವುವು ಮೂರು ವ್ಯಾಹೃತಿಗಳು ನಾಲ್ಕನೆಯದಾದ ಮಹಃ ಎಂಬುದನ್ನು ಮಹಾ ಚಾಮಸ್ಯನು ತಿಳಿದುಕೊಂಡನು.

ತೈತ್ತಿರೀಯ

ಭೂಃ ಎಂದು ಭೂಮಿ ಹಗರಣ, ಭುವಃ ಎನ್ನುವುದು ಅಂತರಿಕ್ಷ ಎಂದರೆ ಅಂತರಿಕ್ಷ ಮಾಲಿನ್ಯ, ಸುವಃ ಎನ್ನುವುದು ಸುವರ್ ಲೋಕ.

ಭೂ ಎಂದರೆ ಶಾಸಕಾಂಗ, ಭುವಃ ಎಂದರೆ ನ್ಯಾಯಾಂಗ, ಸುವಃ ಎಂದರೆ ಕಾರ್ಯಾಂಗ. ಚಮಸವೆನ್ನುವುದು ಸೋಮರಸವನ್ನಿಡುವ ಪಾತ್ರೆ. ಮಹಾ ಚಮಸವೆಂದರೆ ದೊಡ್ಡಪಾತ್ರೆ. ಮಹಾ ಚಮಸನ ಮಗನು ಮಹಾ ಚಮಸ್ಯನು. ಸೋಮರಸವು ವೈದಿಕ ಆದುದರಿಂದ ಈಗ ತ್ಯಾಜ್ಯ. ಸೆಕೆಂಡ್ಸ್ ಸಾಕು. ಇಂದಿನ ಮಹಾ ಚಮಸ್ಯನು ನಾಲ್ಕನೆಯದಾದ ಮಹಃ ಎಂದರೆ ಬಹು ಭಾರೀ ದೊಡ್ಡ ಭ್ರಷ್ಟಾಚಾರವನ್ನು ಕಂಡುಹಿಡಿದು, ಸರ್ವತ್ರ ವ್ಯಾಪಿಯಾದುದರಿಂದ ಅದು ಶ್ರೇಷ್ಠ ಎಂದು ಸಮರ್ಥಿಸಿಕೊಂಡನು ಎಂದು ತಿಳಿದುಕೊಳ್ಳಬೇಡಿ.

ಭೂಃ ಎಂದರೆ ಭೂಲೋಕ, ಅಗ್ನಿ, ಋಕ್ಕುಗಳು, ಪ್ರಾಣ; ಭುವಃ ಎಂದರೆ ಅಂತರಿಕ್ಷ, ವಾಯು, ಸಾಮಗಳು, ಅಪಾನ, ಅನ್ನ. ಸುವಃ ಎಂದರೆ ಸ್ವರ್ಲೋಕ, ಆದಿತ್ಯ, ಯಜುಸ್ಸು, ವ್ಯಾನ. ಮಹಃ ಎನ್ನುವುದು ಆದಿತ್ಯ, ಚಂದ್ರ, ಬ್ರಹ್ಮ. ಬ್ರಹ್ಮವನ್ನರಿತವನು ಬ್ರಹ್ಮವೇ ಆಗುತ್ತಾನೆ ಎನ್ನುವುದು ಉಪನಿಷತ್ತಿನ ಅಭಿಪ್ರಾಯ.



O ಪ್ರಕಾಶ್

''ಸಿ.ಇ.ಟಿ. ಸೀಟು ವಿವರ'' ಅಂತ ವರ್ಷಪೂರ್ತಿ ಕಾಲಂ ಇರುತ್ತೆ ಅನ್ನೋದು ಶುದ್ಧ ಕುಹಕ!!

★ ★ ★

ರಾಜ್ಯದಲ್ಲಿ ಆಸ್ಟ್ರಿಚ್‌ಗಳ ಅಭಿವೃದ್ಧಿಗೆ ನೆರವು

- ಹೇಳಿಕೆ

ರಾಜಕಾರಣಿಗಳಿಗೆ ತಲೆ ಮರೆಸಲು ಸದವಕಾಶ??

★ ★ ★

ವೀರಪ್ಪನ್ ಬಂಧನಕ್ಕೆ ಜಂಟಿ ಕಾರ್ಯಪಡೆ

- ಸುದ್ದಿ

ಈ ಸುದ್ದಿ ನಿರಂತರ.....!!

★ ★ ★

ದೆಹಲಿಯಲ್ಲಿ ಶೀಘ್ರವೇ ಕ್ರಿಪ್ತ ರಾಜಕೀಯ ಬೆಳವಣಿಗೆ

- ವಾಜಪೇಯೀ

ಇದೂ ಒಂದು 'ಸುದ್ದಿ'ಯೆ??

★ ★ ★

ಕ್ರಿಕೆಟ್ ಮಹಾಸಭೆ ಮಂಡಳಿ ಚೆನ್ನೈನಲ್ಲಿ

- ಸುದ್ದಿ

ಹಲವಾರು ಗೂಗ್ಲಿಗಳು ಖಚಿತ!!

★ ★ ★

ಕಾಂಗ್ರೆಸ್ ಸ್ಥಿತಿಗೆ ಅಡ್ವಾಣಿ ವ್ಯಂಗ್ಯ

- ಪತ್ರಿಕೆ

ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ!

★ ★ ★

ರಾಜಕೀಯ ಪ್ರವೇಶ ಇಲ್ಲ

- ನಟ ದಿಲೀಪ್‌ಕುಮಾರ್

ಅನುಭವದ ಮಾತು!!

★ ★ ★

ಗೋಕರ್ಣದಲ್ಲಿ ಹಿಪ್ಪಿಗಳ ಹಾವಳಿ

- ಸುದ್ದಿ

'ಗೋ' ಅನ್ನಬೇಕು ಅವರಿಗೆಲ್ಲ!!

★ ★ ★

ರಾಜಕೀಯ ಅಸ್ಥಿರತೆ; ಕೇಸರಿ ಒಪ್ಪಿಗೆ

ಅಂಗೈ ಹುಣ್ಣಿಗೆ ಕನ್ನಡಿ ಬೇಕೆ??

★ ★ ★

ಕಾಂಗ್ರೆಸ್ ಚಿಹ್ನೆ ಕೈಯಲ್ಲಿ Fate Line

ಇಲ್ವೇ ಇಲ್ಲವೇ ಅಂತ ಒಬ್ಬರು ಓದುಗರು ಕಳವಳ ಸೂಚಿಸಿದ್ದಾರೆ!!

★ ★ ★

ಇರಾಕ್ ಮನವೊಲಿಸಲು ಬಾಗ್ದಾದಿಗೆ ತ್ರಿ ಸದಸ್ಯ ತಂಡ

- ಪತ್ರಿಕೆ

ವೀರಪ್ಪನ್ ಕತೆಯಂತೆಯೇ ಇದೆ!!

★ ★ ★

ಕದನ ಕೋಲಾಹಲ

– ಭೂಷಿ

ಕಮಾಂಡಿಂಗ್ ಆಫೀಸರ್ ಎನ್ನುವ ಉನ್ನತ ಹುದ್ದೆಯ 'ರುಚಿ' ಎರಡು ತಿಂಗಳು ಸಹ ಸವಿದಿರಲಿಲ್ಲ. ಅಷ್ಟರಲ್ಲಿ ವರ್ಕ್ ಷಾಪಿಗೆ ಬಂದ ನನಗಿಂತ ಸೀನಿಯರ್ ಆಗಿದ್ದ ಒಬ್ಬ ಕ್ಯಾಪ್ಟನ್‌ಗೆ ಬಿಟ್ಟುಕೊಡಬೇಕಾಯಿತು. ಆದರೆ ತಕ್ಷಣ 'ಡಿಮೋಷನ್'ನಿನ 'ಕಹಿ' ಅನುಭವಿಸಬೇಕಾದ ಪ್ರಮೇಯ ಒದಗಲಿಲ್ಲ. ರಜ ಸಿಕ್ಕಿತು ಮೈಸೂರಿಗೆ ಹೊರಟೆ. ವಾಪಸ್ ಬರುವ ಹೊತ್ತಿಗೆ ಆ ಕುರ್ಚಿಯನ್ನು ಬೇರೊಬ್ಬ ಬ್ರಿಟಿಷ್ ಲೆಫ್ಟಿನೆಂಟ್ ಕರ್ನಲ್ ಅಲಂಕರಿಸಿದ್ದರು. ರಜದಲ್ಲಿ ಉನ್ನತ ಹುದ್ದೆಯ 'ಅಮಲು' ಇಳಿದಿತ್ತು. ಹೀಗಾಗಿ ನನ್ನ ನಿಜವಾದ ದರ್ಜೆ, ಅಂದರೆ ಕ್ಯಾಪ್ಟನ್ ಹುದ್ದೆಗೆ ಹೊಂದಿಕೊಳ್ಳಲು ಮುಜುಗರ ಪಡಬೇಕಾಗಲಿಲ್ಲ.

ಈ ಸಲ ಮಡದಿ ಮಟ್ಟಿಗೆ ಜೊತೆಯಲ್ಲಿ ಬಂದಳು. ಮರೀನ್ ಡ್ರೈವ್‌ನಲ್ಲಿ ಒಂದು ಬೆಡ್‌ರೂಂ ಫ್ಲಾಟ್‌ನಲ್ಲಿ ಸಂಸಾರ ಹೂಡಿದೆವು. ಇದನ್ನೇ ನಮ್ಮ 'ಡಿಲೇಡ್ ಹನಿಮೂನ್' ಅಂದುಕೊಂಡೆವು. ಕೆಲವೇ ತಿಂಗಳುಗಳಲ್ಲಿ ಕ್ವೀನ್ಸ್ ರೋಡಿನಲ್ಲಿ (ಚರ್ಚ್‌ಗೇಟ್ ಪಕ್ಕ) ಎರಡು ಬೆಡ್‌ರೂಂನ ಫ್ಲಾಟ್ (ದೊಡ್ಡದು) ಅಲಾಟ್ ಆಯಿತು. ದೊಡ್ಡ ಫ್ಲಾಟ್ ಅಂದಮೇಲೆ ಸಂಸಾರ ಚಿಕ್ಕದಾಗಿದ್ದರೆ ಏನು ಚಂದ? ಬೇಗ ಎರಡರಿಂದ ಮೂರು ಸದಸ್ಯರ ಕುಟುಂಬ ಆಯಿತು. ಹೀಗೇ ಎರಡು ವರ್ಷ ಉರುಳುವುದರ ಒಳಗಾಗಿ ಮತ್ತೆ 'ಗಂಟು, ಮೂಟೆ ಕಟ್ಟು' ಅಂದರು ಝಾನ್ಸಿಯಲ್ಲಿದ್ದ ನಮ್ಮ ಸೈನ್ಯದ 'ಶಿರೋರತ್ನ' (Jewel in the crown!) ಅಂತ ಅನ್ನಿಸಿಕೊಂಡಿದ್ದ ಆರ್ಮರ್ಡ್ ಡಿವಿಜನ್‌ಗೆ ಮೇಜರ್ ಆಗಿ ಬಡ್ತಿ ಕೊಟ್ಟು!

ಈಗ ಮೊಟ್ಟಮೊದಲ ಬಾರಿ ನಿಜವಾದ ಸೈನಿಕ ಜೀವನದ ಅರಿವು ಆಗತೊಡಗಿತು. ಇಷ್ಟು ದಿನ ನಾನು ಸೇವೆ ಸಲ್ಲಿಸಿದ ಅಥವಾ ಟ್ರೇನಿಂಗ್ ಪಡೆದ ಸಂಸ್ಥೆಗಳು ಬಹುತೇಕ ಒಂದು ಕೈಗಾರಿಕಾ ಸಂಸ್ಥೆಯನ್ನೋ ಅಥವಾ ಕಾಲೇಜನ್ನೋ ಹೋಲುತ್ತಿದ್ದವು. ಅವು ಯುದ್ಧಕ್ಕಾಗಿ ಅಳವಡಿಸಿದ ಸಂಸ್ಥೆಗಳಾಗಿರಲಿಲ್ಲ. ಆದರೆ ಈ ಆರ್ಮರ್ಡ್ ಡಿವಿಜನ್ ಯುದ್ಧ ಮಾಡುವುದಕ್ಕೆಂದೇ ಸಂಘಟಿಸಿದ್ದು ಸೇನೆಯ ನಾನಾ ವಿಭಾಗಗಳ ತುಕಡಿಗಳನ್ನೊಳಗೊಂಡ ಒಂದು ಸ್ವಾವಲಂಬಿ ಪಡೆ ಆಗಿತ್ತು. ಸುಮಾರು 17- 18 ಸಾವಿರ ಸೈನಿಕರು, 180-200 ಟ್ಯಾಂಕ್‌ಗಳು, ನೂರಾರು ಸ್ವಯಂ ಚಾಲಿತ(SP- Self propelled) ಗನ್‌ಗಳು, ಸಾವಿರಾರು ಇತರೇ ವಾಹನಗಳು, ಎಲೆಕ್ಟ್ರಾನಿಕ್ ಉಪಕರಣಗಳು ಮತ್ತು ಇತರ ಅನೇಕ ಯುದ್ಧೋಪಕರಣಗಳನ್ನು ಹೊಂದಿದ್ದ ಒಂದು ಬೃಹತ್ ಪಡೆ! ಇದರ ಎಲ್ಲಾ ಯುದ್ಧೋಪಕರಣಗಳಿಗೆ ರಿಪೇರಿ ಮತ್ತು ತಪಾಸಣೆ(Repair and Inspection) ಸೌಲಭ್ಯ ಒದಗಿಸಲು ಮುಖ್ಯವಾಗಿ ಮೂರು EME ವರ್ಕ್‌ಷಾಪುಗಳು ಮತ್ತು ಒಂದು ರಿಕವರಿ ಕಂಪನಿ (ಅಂದರೆ ಕೆಟ್ಟುಹೋದ ಅಥವಾ ಜಖಂ ಆದ ಟ್ಯಾಂಕುಗಳು ಮತ್ತು

ಇತರ ವಾಹನಗಳನ್ನು ಹಳ್ಳಕೊಳ್ಳಗಳಿಂದ ಎತ್ತಿ ರಸ್ತೆ ಮೂಲಕ ವರ್ಕ್‌ಷಾಪಿಗೆ ಸಾಗಿಸುವುದಕ್ಕೂ ಅಥವಾ ಅಂತಹ ವಾಹನಗಳು ರಸ್ತೆಯನ್ನು ಬ್ಲಾಕ್(block) ಮಾಡಿದ್ದರೆ ಮೊದಲು ಅವುಗಳನ್ನು ಪಕ್ಕಕ್ಕೆ ಸರಿಸಿ ರಸ್ತೆ ಕ್ಲಿಯರ್ ಮಾಡುವುದಕ್ಕೂ ಸಜ್ಜಿತವಾದ ಯೂನಿಟ್) ಇದ್ದವು. ಇವುಗಳ ಉಸ್ತುವಾರಿ, ಮೇಲ್ವಿಚಾರಣೆ ಮತ್ತು ಸರಿಯಾದ ಬಳಸುವಿಕೆ ಡಿವಿಜನಲ್ ಹೆಡ್‌ಕ್ವಾರ್ಟರ್ಸ್‌ನಲ್ಲಿದ್ದ EME ಬ್ರಾಂಚ್‌ನದಾಗಿತ್ತು. ಇದರ ಮುಖ್ಯಸ್ಥ ಒಬ್ಬ ಲೆಫ್ಟಿನೆಂಟ್ ಕರ್ನಲ್ ಕಮಾಂಡರ್ EME ಅಥವಾ CEME ಎಂದು ಕರೆಯಲ್ಪಟ್ಟಿದವರು. ಇವರ ಸಿಬ್ಬಂದಿಯಲ್ಲಿ ಇಬ್ಬರು ಮೇಜರ್‌ಗಳು. ಅವರಿಬ್ಬರಲ್ಲಿ ಒಬ್ಬನಾಗಿ ನಾನು ಸೇರಿಕೊಂಡೆ.

ಆರ್ಮರ್ಡ್ ಡಿವಿಜನ್ ಮುಖ್ಯವಾಗಿ ಒಂದು ಆಕ್ರಮಣಕಾರಿ ಪಡೆ. ಶ್ರೀಘ್ರ ಚಲನೆ, ವಜ್ರಮುಷ್ಠಿಯಂತೆ ಹೊಡೆಯುವ ಶಕ್ತಿ, ಶತ್ರುಪಡೆಗಳನ್ನು ಮಿಂಚಿನಂತೆ ಸುತ್ತುವರಿದು ಧ್ವಂಸ ಮಾಡುವುದು ಮುಂತಾದ ಕದನ ಕೌಶಲಗಳನ್ನು ಇದು ಕರಗತ ಮಾಡಿಕೊಂಡಿರುವುದು ಅತ್ಯವಶ್ಯಕ. ಅದಕ್ಕಾಗಿ ಸತತ ಅಭ್ಯಾಸ ನಡೆಸುವುದು ಅದರ ಸಹಜವಾದ ಕಾರ್ಯ. ಅದರಲ್ಲೂ ಶ್ರೀಘ್ರ ಚಲನೆಯ ಅಭ್ಯಾಸ ಡಿವಿಜನ್ ಎಲ್ಲಾ ಅಂಗಗಳು ಮಾಡಲೇ ಬೇಕಾದ ಮುಖ್ಯವಾದ ಕಾರ್ಯ.

ಪೂರ್ತಿ ಡಿವಿಜನ್ ಎಲ್ಲರನ್ನೂ ಒಡಗೂಡಿ ಎಲ್ಲಾ ತರಹೆಯ ಅಭ್ಯಾಸಗಳನ್ನು ಒಟ್ಟಿಗೆ ನಡೆಸುತ್ತಿದ್ದುದು ವರ್ಷಕ್ಕೆ ಅಥವಾ ಎರಡು ವರ್ಷಕ್ಕೆ ಒಂದು ಬಾರಿ. ಆದರೆ ಅದರ ಬೇರೆ ಬೇರೆ ಭಾಗಗಳು ತಮ್ಮ ಕಾರ್ಯಕೌಶಲತೆ ವೃದ್ಧಿಪಡಿಸಿಕೊಳ್ಳಲೂ ಮತ್ತು ಶ್ರೀಘ್ರ ಚಲನೆ, ಚಲಿಸುವಾಗ ಶತ್ರುಧಾಳಿಯಿಂದ Convoy ಗಳನ್ನಾಗಲಿ ಅಥವಾ ಕ್ಯಾಂಪ್ ಮಾಡಿದ್ದಾಗ ಅದರ ಕ್ಷೇತ್ರವನ್ನು ರಕ್ಷಿಸಿಕೊಳ್ಳುವುದನ್ನಾಗಲಿ ವರ್ಷಕ್ಕೆ ಒಂದು ಸಲವಾದರೂ Exercise ಎಂದು ಝಾನ್ಸಿ ಬಿಟ್ಟು 3,4 ದಿನಗಳಿಂದ ಒಂದು ವಾರದವರೆಗೂ ಹೊರಗೆ ಹೋಗಿ ಅಭ್ಯಾಸ ಮಾಡುವುದು ರೂಢಿಯಲ್ಲಿತ್ತು. ನಮ್ಮ EME ವರ್ಕ್‌ಷಾಪುಗಳು ಈ ಚಲನಾ ಕೌಶಲದ ಜೊತೆ ರಾತ್ರಿ ಕಾಲದಲ್ಲಿ ರಿಪೇರಿ ಕಾರ್ಯ ನಡೆಸುವುದನ್ನೂ ಅಭ್ಯಸಿಸುತ್ತಿದ್ದೆವು....

.... ಗೊತ್ತು! ಗೊತ್ತು!... ಸ್ವಲ್ಪ ಸಹಿಸಿಕೊಳ್ಳಿ.... ಪೀಠಿಕೆ ಬೋರ್ ಅಂತ ಅನ್ನಿಸುತ್ತಿರಬಹುದು ಆದರೆ ಇಷ್ಟಾದರೂ background ತಿಳಿಸದಿದ್ದರೆ ಮುಂದೆ ಬರುವ ಸ್ವಾರಸ್ಯಕರ ಘಟನೆಗಳನ್ನು ಹೇಗೆ ತಾನೇ ಆಸ್ವಾದಿಸುವಿರಿ ಹೇಳಿ? ಇನ್ನು ಒಂದೇ ಒಂದು ಮಾತು ಹೇಳಿ ವಿಷಯಕ್ಕೆ ಬಂದುಬಿಡುತ್ತೇನೆ.....

ನಮ್ಮ ಅಭ್ಯಾಸ ಕ್ಷೇತ್ರ ಝಾನ್ಸಿಯ ಸುತ್ತಮುತ್ತಲಿನ ಶಿವಪುರಿ ಕಾಡುಗಳು, ಕೆಲವು ಗುಡ್ಡಗಾಡು ಪ್ರದೇಶಗಳು, ಚಂಬಲ್ ಕೊರಕಲುಗಳು ಇವುಗಳಿಗೆ ಸೀಮಿತವಾಗಿತ್ತು. ಚಂಬಲ್ ಅಂದ ಮೇಲೆ ಡಕಾಯಿತರ ಮಾತು ಬರದೇ ಇರುತ್ತದೆಯೇ? ಅವರ ನೆರಳು ಸದಾ ಇರುತ್ತಿತ್ತೆಂದು ಹೇಳಬೇಕಾಗಿಲ್ಲ. ನಾನು ಡಿವಿಜನ್‌ನಲ್ಲಿ ಕಳೆದ 3, 3 1/2 ವರ್ಷಗಳಲ್ಲಿ ನಾವು 5, 6 ಸಲ ಅಭ್ಯಾಸಕ್ಕೆಂದು ಹೊರಗೆ ಹೋಗಿದ್ದೆವು. ಆಗ ನಡೆದ ಕೆಲವು ಸ್ವಾರಸ್ಯಕರ

ಘಟನೆಗಳನ್ನು ಇಲ್ಲಿ ವಿವರಿಸುತ್ತೇನೆ..... ಆಲಿಸಿ....

ಒಂದು ಸಲ ಅಭ್ಯಾಸಕ್ಕೆಂದು ಹೊರಟೆವು. ನಮ್ಮ EME ಯೂನಿಟ್‌ಗಳೆಂದರೆ ಸುಮಾರು ಒಂದು ಸಾವಿರಕ್ಕಿಂತ ಜಾಸ್ತಿ ಜನ, 200 ಕ್ಕಿಂತ ಜಾಸ್ತಿ ವಾಹನಗಳು ಇವುಗಳನ್ನು ಹೊಂದಿದ್ದೆವು. ಮೊದಲೇ ಹೇಳಿದಂತೆ ಇವು ಹೆಡ್‌ಕ್ವಾರ್ಟರ್ಸ್, ಮೂರು ವರ್ಕ್‌ಷಾಪ್ ಮತ್ತು ಒಂದು ರಿಕವರಿ ಕಂಪೆನಿಗಳಲ್ಲಿ ಹಂಚಿಕೊಂಡಿದ್ದವು.

ಮೊದಲದಿನ ರಾತ್ರಿ ಬಿಡಾರ ಹೂಡಿದೆವು. ಎಲ್ಲರೂ ತಮ್ಮ ಕ್ಷೇತ್ರ ರಕ್ಷಣೆಗಾಗಿ trench ಅಗೆದು ಅವುಗಳನ್ನು ಸಿಪಾಯಿಗಳಿಗೆ ಹಂಚಿ,duty roster ತಯಾರಿಸಿದ್ದಾಯಿತು ತಮ್ಮ ತಮ್ಮ ಕ್ಷೇತ್ರಗಳಲ್ಲಿ ವಾಹನಗಳನ್ನು (ಅದರಲ್ಲಿ ವರ್ಕ್‌ಷಾಪ್ ಲಾರಿ, ಟೆಲಿಕಾಂ ಲಾರಿ, ವೆಲ್ಡಿಂಗ್ ಲಾರಿ, ಸ್ಟೋರ್ಸ್ ಲಾರಿಗಳು. ಇತ್ಯಾದಿ ಇರುತ್ತಿದ್ದವು) ದೂರ ದೂರ ನಿಲ್ಲಿಸಿ (ಶತ್ರುವಿನ ವಾಯುಧಾಳಿ ಆದಲ್ಲಿ ಆದಷ್ಟು ನಷ್ಟ ಕಡಿಮೆ ಮಾಡಿಕೊಳ್ಳಲು) ಕಾಮೋಫ್ಲೇಜ್ (camouflage) ಮಾಡಿ ಆಯಿತು ಇಷ್ಟೆಲ್ಲಾ ಆದಮೇಲೆ ಎಲ್ಲಾ ಆಫೀಸರ್‌ಗಳೂ ಮೆಸ್‌ಲಾರಿಯ ಪಕ್ಕಕ್ಕೆ ಲಗತ್ತಿಸಿದ್ದ ಮಸ್‌ಟೆಂಟ್ ಒಳಗೆ ಸೇರಿದೆವು. ಅದೂ, ಇದೂ ಮಾತುಕಥೆ ಆಡುತ್ತಾ ಇದ್ದಾಗ ಡಕಾಯಿತರ ಹಾವಳಿಯ ಪ್ರಸ್ತಾಪ ಬಂತು. ಹೊರಡುವ ಮುನ್ನ ''ಡಕಾಯಿತರ ಚಟುವಟಿಕೆ ಜಾಸ್ತಿ ಆಗಿದೆ... ಪೋಲೀಸ್ ಸ್ಟೇಷನ್‌ಗಳ ಮೇಲೆ ಧಾಳಿ ಮಾಡಿ ಶಸ್ತ್ರಾಸ್ತ್ರಗಳನ್ನು ದೋಚಿದ್ದಾರೆ....camp ನಲ್ಲಿ ಜಾಸ್ತಿ ಎಚ್ಚರಿಕೆ ವಹಿಸಿ'' ಅಂತ ಆದೇಶ ಬಂದಿತ್ತು. ಡಕಾಯಿತರ ಮಾತು ಬಂದಾಗ, ಒಬ್ಬ ಆಫೀಸರ್...'ಯಾವನೋ ಒಬ್ಬ ಹಳ್ಳಿಗನಂತೆ ಕಂಡವನು ಸುತ್ತ ಮುತ್ತ ಸಂಚರಿಸುತ್ತಿದ್ದ... ನನಗೇನೋ ಅನುಮಾನ' ಅಂದ. ಸರಿ... 'ಎಲ್ಲರೂ ಜಾಗೃತರಾಗಿರಿ' ಅಂತ ನಮ್ಮ CEME ತಾಕೀತು ಮಾಡಿದರು..... ಊಟ ಮುಗಿಸಿದ ನಂತರ ಎಲ್ಲರೂ ಅವರವರ ಟೆಂಟ್‌ಗಳ ವಾಹನಕ್ಕೆ ಹೋದರು. ಕಮಾಂಡರ್ ನನ್ನನ್ನು 'ಸ್ವಲ್ಪ ಇರು' ಎಂದು ಸನ್ನೆ ಮಾಡಿದರು. ಎಲ್ಲರೂ ಹೊರಟುಹೋದ ಮೇಲೆ 'ಇದು ಒಳ್ಳೆಯ ಸಮಯ ವರ್ಕ್‌ಷಾಪ್‌ಗಳು ತಮ್ಮ ಕ್ಷೇತ್ರದ ರಕ್ಷಣೆ ಹೇಗೆ ಮಾಡಿಕೊಂಡಿದ್ದಾರೋ ಪರೀಕ್ಷಿಸೋಣ.... ಮಧ್ಯರಾತ್ರಿಯ ಮೇಲೆ ಒಂದು ವರ್ಕ್‌ಷಾಪ್ ಮೇಲೆ ಧಾಳಿ ನಡೆಸೋಣ, ಸಿದ್ಧಪಡಿಸಿಕೋ'... ಎಂದರು.

ನಮ್ಮ ರಿಕವರಿ ಕಂಪನಿಯಲ್ಲಿ ನೋರ್ಯಾರಾಂ ಅಂತ ಒಬ್ಬ JCO ಇದ್ದ. ಎರಡನೇ ಮಹಾಯುದ್ಧದಲ್ಲಿ ಪಳಗಿದ ಕೈ... ಅಷ್ಟಾಗಿ ಓದು ಬರಹ ಇಲ್ಲದದ್ದಿರೂ Common Sense ಬೇಕಾದಷ್ಟು ಇತ್ತು. ಧೈರ್ಯಸ್ಥ.... ಸಮಯಸ್ಫೂರ್ತಿ(Initiative) ಸಹ ಸಾಕಷ್ಟು ಇತ್ತು. ವೃತ್ತಿಯಲ್ಲಿ ಡ್ರೈವರ್ ಅಷ್ಟೆ.

ಕರೆಸಿದೆ... ವಿಷಯ ತಿಳಿಸಿ ನಿಮ್ಮ ಕಂಪನಿಯಿಂದ ಒಂದು 10- 15 ಸಿಪಾಯಿಗಳನ್ನು ಕರೆದುಕೋ. ಎಲ್ಲರಿಗೂ ಹುಸಿಗುಂಡುಕೊಡು. ಜೊತೆಗೆbicat strips(ಒಂದು ತರಹೆಯ ಪಟಾಕಿ... ರೈಫಲ್ ಶಬ್ದವನ್ನು ಅನುಕರಿಸುವ ಸಾಧನ) ಸಾಕಷ್ಟು ಹಂಚು.. ಮಧ್ಯರಾತ್ರಿಗೆ ಯಾರಿಗೂ ತಿಳಿಯದ ಹಾಗೆ ನಾನು ತಿಳಿಸಿದ ಜಾಗಕ್ಕೆ ಬಾ' ಎಂದೆ.

ಮಧ್ಯರಾತ್ರಿಯ ಮೇಲೆ ಕಮಾಂಡರ್ ಜೊತೆಗೂಡಿ ಇವರುಗಳನ್ನು ಸೇರಿಕೊಂಡೆ.

ಸುತ್ತಿ, ಬಳಸಿ ಸುಮಾರು ಒಂದು, ಒಂದೂವರೆ ಘಂಟೆಯ ಹೊತ್ತಿಗೆ ಒಂದು ವರ್ಕ್‌ಷಾಪಿನ ಹೊರವಲಯದ ಸಮೀಪ ಬಂದೆವು. ಅಲ್ಲಿಂದ ಮುಂದೆ ಕಳ್ಳತನದಿಂದ ವರ್ಕ್‌ಷಾಪಿನ ಟ್ರೆಂಚ್‌ಗಳ ಬಳಿಸಾಗಿ, CEME ಸಿಗ್ನಲ್ ಕೊಟ್ಟ ಕೂಡಲೇ ಹುಸಿಗುಂಡು ಹಾರಿಸುತ್ತಾ, bicat strips ಸಿಡಿಸುತ್ತಾ, ಜೋರಾಗಿ ಕೂಗುತ್ತಾ ಟ್ರೆಂಚ್‌ಗಳ ಮೇಲೆ ಧಾಳಿ ನಡೆಸಿದೆವು!

ವರ್ಕ್‌ಷಾಪಿನವರು ಸತರ್ಕರಾಗಿಯೇ ಇದ್ದರು... ಸೀಟಿಗಳು ಶುರು ಆದವು... ಕ್ಷಣಾರ್ಧದಲ್ಲಿ ಸಿಪಾಯಿಗಳು ರೈಫಲ್ ಹಿಡಿದು ತಮ್ಮ ತಮ್ಮ ಟ್ರೆಂಚ್‌ಗಳ ಕಡೆ ಓಡಿ ಬಂದರು ಬರುವಾಗಲೇ ರೈಫಲ್‌ಗೆ bayonet ಜೋಡಿಸಲು ಶುರು ಮಾಡಿದ್ದರು. ಕಮಾಂಡರ್ ಮತ್ತು ನಾನು ಒಟ್ಟಿಗೆ ಒಂದು ಟ್ರೆಂಚ್ ಸಮೀಪಿಸಿದೆವು. ಅದೇ ಸಮಯದಲ್ಲಿ ಇಬ್ಬರು ಸಿಪಾಯಿಗಳು ರೈಫಲ್‌ಗೆ bayonet ಅಳವಡಿಸುತ್ತಾ ಟ್ರೆಂಚ್‌ನಲ್ಲಿ ಧುಮುಕಿದರು.... ಕಮಾಂಡರ್ ಸಹ ಅದೇ ಟ್ರೆಂಚ್‌ನಲ್ಲಿ ಧುಮುಕಿ ನಿಮಿಷಾರ್ಧದಲ್ಲಿ ಇಬ್ಬರು ಸಿಪಾಯಿಗಳ ಕತ್ತುಗಳನ್ನು ಹಿಡಿದು ತಮ್ಮ ಬಳಿ ಎಳೆದುಕೊಂಡರು!.... ಇನ್ನೂ ಸಿಪಾಯಿಗಳು ಓಡಿ ಬರುತ್ತಿದ್ದರು. ಪರಿಸ್ಥಿತಿ ವಿಕೋಪಕ್ಕೆ ತಿರುಗಬಹುದು ಎಂದು ಅನ್ನಿಸಿತು. ನಾನು ಕೂಡಲೇ ಕೈಗಳನ್ನು ಮೇಲೆಕ್ಕೆ ಎತ್ತಿ, ನಿಂತುಕೊಂಡು 'ನಿಲ್ಲಿಸಿ' ಇದು ಬರೀ ಅಭ್ಯಾಸ.... ನಿಮ್ಮ CEME ಇಲ್ಲಿದ್ದಾರೆ ಅಂತ ಕೂಗಿದೆ. ಇಬ್ಬರು ಸಿಪಾಯಿಗಳು ನನ್ನ ಕಡೆ ರೈಫಲ್ ತಿರುಗಿಸಿ 'ನಡೆಯಿರಿ ನಮ್ಮ ನಾಯಕನ ಹತ್ತಿರ' ಅಂತ ಕರೆದೊಯ್ದರು. ಅಲ್ಲಿ ಆಗಲೇ ವರ್ಕ್‌ಷಾಪಿನ ಆಫೀಸರ್ ಕಮಾಂಡಿಂಗ್ (OC- ಒಬ್ಬ ಮೇಜರ್) ಹಾಜರಿದ್ದ. ಧಾಳಿ ಎಷ್ಟು ಸ್ವೈಜವಾಗಿತ್ತೆಂದರೆ ಅವನು ನಿಜವಾದ ಬುಲೆಟ್‌ಗಳನ್ನು ಹಂಚಲು ಆಜ್ಞೆ ಕೊಡುವುದರಲ್ಲಿದ್ದ! (ಅಭ್ಯಾಸದ ಸಮಯದಲ್ಲಿ ಗಾರ್ಡ್ ಕಮಾಂಡರ್ ಬಳಿ ನಿಜವಾದ ಬುಲೆಟ್‌ಗಳನ್ನು ಒಂದು ಕೆಂಪು ಬಟ್ಟೆಯಲ್ಲಿ ಸುತ್ತಿ ಇಟ್ಟಿರುತ್ತಿದ್ದೆವು. ಬಾಕಿಯವರಿಗೆಲ್ಲಾ ಹುಸಿಗುಂಡು. ಎಮರ್ಜೆನ್ಸಿ ಎಂದು ತೋರಿದರೆ duty ಆಫೀಸರ್ ಅಥವಾ ಹಿರಿಯ ಅಧಿಕಾರಿಯ ಆಜ್ಞೆ ಮೇರೆಗೆ ಈ ಬುಲೆಟ್‌ಗಳು ಹಂಚಲ್ಪಡುತ್ತಿದ್ದವು)... ನನ್ನನ್ನು ನೋಡಿದೊಡನೆಯೇ ವಿಷಯ ಗ್ರಹಿಸಿದ....CEME ಒಂದು ಶಹಬಾಷ್‌ಗಿರಿ ಕೊಟ್ಟರು!

ಎರಡನೇ ಸಲ ಅಭ್ಯಾಸ ಮುಗಿಸಿ, ರಾತ್ರಿ ಕಾನ್ವಾಯ್ (Convoy) ಚಲಿಸುವ ಕಾರ್ಯ ಹಮ್ಮಿಕೊಂಡಿದ್ದೆವು. ಈ ಸಲ ನಮ್ಮ camp ಶಿವಪುರಿ ಕಾಡಿಗೆ ಅಂಟಿಕೊಂಡಿತ್ತು. ಪಕ್ಕದಲ್ಲೇ ವನಾಚ್ಛಾದಿತ ಗುಡ್ಡಗಾಡು ಪ್ರದೇಶ. ಅದರ ಮೂಲಕ ಗುಡ್ಡಗಾಡಿನ ರಸ್ತೆ ಸುತ್ತುಸುತ್ತಾಗಿ ಸಾಗಿತ್ತು... ಯಥಾ ಪ್ರಕಾರ ಡಕಾಯಿತರ ಬಗ್ಗೆ ಚೇತಾವಣಿ ಆಗಿತ್ತು.

'ಈ ಸಲ ಚಲಿಸುವ ವಾಹನಗಳ ರಕ್ಷಣೆ ಹೇಗೆ ಮಾಡುತ್ತಾನೋ ನೋಡೋಣ' ಅಂದರು ನಮ್ಮ CEME.... ಸರಿ, ಯಾರಿಗೂ ತಿಳಿಯದಂತೆ ನಾವುಗಳು ನೋಯರ್ಾರಾಂನ 'ಸೈನ್ಯ' ದೊಡನೆ ಮೊದಲೇ ಹೊರಟು ಗುಡ್ಡಗಾಡಿನ ರಸ್ತೆ ಮಗ್ಗುಗಲ್ಲಿ ಅಡಗಿ ಕೂತೆವು. ಈ ಸಲ ಹುಸಿಗುಂಡು, bicat strips ಅಲ್ಲದೆ ಕೆಲವು smoke bombs

ಸಹ ತೆಗೆದುಕೊಂಡು ಹೋಗಿದ್ದೆವು.... ನಾವು ಅಡಗಿದ್ದುದು ದಡ್ಡವಾದ ಕಾಡು ಸ್ವಲ್ಪ ದೂರದಲ್ಲಿ ಒಂದು ಅರಮನೆಯಂತೆ ಕಾಣುವ hunting lodge....ಅದರ ಮುಂದೆ ಒಂದು ಪ್ರಶಾಂತವಾದ ಸರೋವರ... ನಾವಿದ್ದೆಡೆ ಗಾಢಾಂಧಕಾರವಿದ್ದರೂ ಸರೋವರದ ಸುತ್ತಮುತ್ತ ಬೆಳದಿಂಗಳು ಮೂಡಿತ್ತು. ವನ್ಯ ಪ್ರಾಣಿಗಳು ನೀರು ಕುಡಿಯಲು ಬರುವ ಸ್ಥಳ ಅಂತ ಕಾಣುತ್ತೆ... ಅವುಗಳ ಕೂಗಾಟ ಆಗಾಗ ಕೇಳಿಸುತ್ತಿತ್ತು.... ''ಹುಲಿ ತನ್ನ ಸಂಗಾತಿಯನ್ನು ಅರಸುತ್ತಿದೆ''- ಅಂದ ನೋಯರ್‌ರಾಂ (ಇದಕ್ಕೆ ಹಿಂದಿನ ರಾತ್ರಿ, ನಮ್ಮ camp ನ ಸೆಂಟ್ರಿಗಳು ಹುಲಿ camp ಮೂಲಕ ಹಾದು ಹೋಗಿದ್ದನ್ನು ನೋಡಿದ್ದೆವು ಎಂದು ಹೇಳಿದ್ದರು)..... ಏನೇ ಆಗಲಿ ಪರಿಸರ ಬಹಳ ಗಂಭೀರವಾಗಿತ್ತು.....

convoy ಬರಲು ಷುರು ಆಯಿತು.... ಬಯಲು ಪ್ರದೇಶದಲ್ಲಿ ಒಂದು ವಾಹನಕ್ಕೂ, ಇನ್ನೊಂದು ವಾಹನಕ್ಕೂ ಸುಮಾರು ನೂರು ಗಜ ಅಂತರ ಇರಬೇಕು (ಶತ್ರುವಿನ ವಾಯುಧಾಳಿಯಿಂದ ಆದಷ್ಟೂ ವಾಹನಗಳು ಪಾರಾಗಲೆಂದು) ಆದರೆ ಗುಡ್ಡಗಾಡು ಮತ್ತು ವನ್ಯ ಪ್ರದೇಶಗಳಲ್ಲಿ ಅಂತರ ಕಡಿಮೆ ಮಾಡಿಕೊಳ್ಳಬೇಕು (ಶತ್ರು ಏನಾದರೂ ಕದ್ದು, ನುಸುಳಿ ಧಾಳಿ ಮಾಡಿದಲ್ಲಿ ರಕ್ಷಣಾ ವ್ಯೂಹ ರಚಿಸಿ ಎದುರಿಸಲು ಸಹಕಾರವಾಗುವಂತೆ) ಒಂಬರ ಹಿಂದೆ ಒಂದು ವಾಹನ ಬರಲು ಷುರು ಆಯಿತು... ಎರಡು ವರ್ಕ್‌ಷಾಪುಗಳ convoy ಗಳನ್ನು ಮುಂದೆ ಹೋಗಲು ಬಿಟ್ಟೆವು. ಮೂರನೇ ವರ್ಕ್‌ಷಾಪ್ ಬಂತು. ಮುಂದೆ ಜೀಪಿನಲ್ಲಿ, ಆದಿನ, ಆ ವರ್ಕ್‌ಷಾಪಿನ ಸೆಕೆಂಡ್ ಇನ್ ಕಮಾಂಡ್ (ಒಬ್ಬ captain) convoy ನಾಯಕತ್ವ ವಹಿಸಿದ್ದ (ವರ್ಕ್‌ಷಾಪಿನ OC-ಮೇಜರ್, ವಿಪರೀತ ಜ್ವರದಿಂದ ನರಳುತ್ತಿದ್ದು ಜೀಪಿನ ಹಿಂದೆ ಬರುತ್ತಿದ್ದ ಸ್ಟೇಷನ್ ವಾಗನ್‌ನಲ್ಲಿ ಮಲಗಿದ್ದ)... ಇವೆರಡೂ ಸ್ವಲ್ಪ ಮುಂದೆ ಸರಿದ ಮೇಲೆ ಧಾಳಿ ಷುರು ಮಾಡಿದೆವು. ಜೊತೆಗೆ Smoke bombs ಸಿಡಿಸಿದೆವು!

ಶಬ್ದ, ಗಲಾಟೆ ಕೇಳಿಸಿದ ಒಡನೆಯೇ ಜೀಪ್ ನಾಗಾಲೋಟ ಷುರುಮಾಡಿತು. ಹಿಂದೆ ಸ್ಟೇಷನ್ ವ್ಯಾಗನ್ ಸಹ!... ನೋಡು ನೋಡುತ್ತಿದ್ದಂತೆ, convoy ಗತಿ ಏನಾಯಿತು ಎಂದು ಕೂಡ ಲೆಕ್ಕಿಸದೆ ಪಲಾಯನ ಮಾಡಿದವು ಮತ್ತೊಂದು smoke bomb ಸಿಡಿಸಿದೆವು. ರಸ್ತೆಯ ಮೇಲೆ convoy ನಿಂತಿತು ಆದರೆ ಯಾರೂ ಇಳಿಯಲಿಲ್ಲ. ಅಷ್ಟರಲ್ಲಿ ಕೊನೆಯ ಗಾಡಿಯಲ್ಲಿ ಬರುತ್ತಿದ್ದ ಸೆಕೆಂಡ್ ಲೆಫ್ಟಿನೆಂಟ್ ಎನ್.ಜಿ. ರಾಮಸ್ವಾಮಿ (ಮೈಸೂರಿನವ) ಕೆಳಗಿಳಿದು, ಕೈನಲ್ಲಿ ಪಿಸ್ತೂಲ್ ಹಿಡಿದು, ಗುಂಡುಗಳ ಶಬ್ದ ಬರುತ್ತಿದ್ದ ಪಕ್ಕ ಬಿಟ್ಟು ರಸ್ತೆಯ ಆಚೆಯ ಪಕ್ಕದಲ್ಲಿ, ವಾಹನಗಳ ರಕ್ಷಣೆ ಪಡೆದುಕೊಂಡು ಓಡಿ ಬಂದ! ಬರುವಾಗ ಎಲ್ಲರೂ ಗಾಡಿಗಳಿಂದ ಇಳಿಯಿರಿ, ರಸ್ತೆ ಬಲ ಪಕ್ಕಕ್ಕೆ position ತೆ[illegible]ದುಕೊಳ್ಳಿ... ಮುಂದೆ ನನ್ನ ಆಜ್ಞೆಗಾಗಿ ಕಾಯಿರಿ' ಎಂದು ಕೂಗಿ ಎಲ್ಲರನ್ನೂ ಇಳಿಸುತ್ತಿದ್ದ. ಹತ್ತಿರ ಇದ್ದ ಒಂದು ಸೇತುವೆ ಪಕ್ಕದಲ್ಲಿ ಅವಿತು ನಮ್ಮ ಕಡೆ ಟಾರ್ಚ್ ಬೆಳಕು ಚೆಲ್ಲಿದ! CEME ಗೆ ಮಹದಾನಂದವಾಯಿತು. "Well done ರಾಮು... Well done my boy' ಅಂತ ಬೆನ್ನು ತಟ್ಟಿದರು... Captain ಗೆ ಮುಂದಿನ ಕ್ಯಾಂಪ್‌ನಲ್ಲಿ ಬೇರೆ ಬಳುವಳಿ ಕೊಟ್ಟರು!

ಒಂದು ಕಥೆಯ ತುಣುಕು.... ಇದೇ ತರಹೆಯ ಅಭ್ಯಾಸದ ಬಗ್ಗೆ... ಈ ಸಲ ಅಭ್ಯಾಸ ಮುಗಿಸಿ ಝಾನ್ಸಿಗೆ ವಾಪಸ್ ಆಗಲು ಸಜ್ಜಾಗಿದ್ದೆವು. ಸುಮಾರು 80,90 ಮೈಲಿ ರಸ್ತೆ ಪ್ರಯಾಣ ದಿನದ ಬೆಳಕಿನಲ್ಲಿ ದಾರಿಯಲ್ಲಿ ಗುಡ್ಡಗಾಡು ಪ್ರದೇಶವಿತ್ತು. ಒಂದು ಗುಡ್ಡದ ಮೇಲೆ ಒಂದು ಊರು..... ಚಂದೇರಿ! ಚಂದೇರಿ ಮೇಲೆ ವಾಪಸ್ ಬರುವ ವಿಷಯ ಝಾನ್ಸಿಯಲ್ಲಿ ಎಲ್ಲಾ ಅಮ್ಮಾವರಿಗೂ ತಿಳಿದಿತ್ತು... ಇನ್ನೇನು? ಊರು ಹೊಕ್ಕದೆ ಮುಂದುವರೆಯುವುದಕ್ಕಾಗುತ್ತದೆಯೇ? ಒಬ್ಬ ಕ್ಯಾಪ್ಟನ್‌ನನ್ನು convoy ಕಮಾಂಡರ್ ಮಾಡಿ, ನೀನು ಎಲ್ಲಾ ವಾಹನಗಳನ್ನೂ ಕರೆದುಕೊಂಡು ನಡಿ, ನಾವುಗಳೆಲ್ಲಾ ಚಂದೇರಿ ವ್ಯಾಪಾರ ಮುಗಿಸಿ convoy ಸೇರಿಕೊಳ್ಳುತ್ತೇವೆ ಅಂತ ಹೇಳಿ ಹೊರಟೆವು.

ವ್ಯಾಪಾರ ಮುಗಿಸಿ ಚಂದೇರಿ ಊರಿನ ಕೋಟೆ ಬಾಗಿಲು ದಾಟಿ ರಸ್ತೆಗೆ ಬಂದೆವು. ವಾಹನಗಳ ಗತಿ ನೋಡಿ ದಿಘ್ಭ್ರಾಂತರಾದೆವು... ಬೆಟ್ಟದ ದಾರಿಯಲ್ಲಿ ಲಾರಿಗಳ 'ರೇಸ್' ನಡೆಯುತ್ತಿದ್ದಂತೆ ಕಂಡಿತು. ಒಂದೊಂದೂ 45, 50 ಮೈಲಿ ವೇಗದಲ್ಲಿ ಹೋಗುತ್ತಿದ್ದವು! ರಸ್ತೆ ಇಳಿಜಾರಲ್ಲದೆ ತಿರುವುಗಳು ಬೇರೆ. ಯಾವಾಗ ಬೇಕಾದರೂ ಅನಾಹುತ ಆಗುವ ಸಾಧ್ಯತೆ ಇತ್ತು.

ನಮ್ಮ CEME ತಮ್ಮ ಜೀಪಿನಿಂದ"follow me' ಅಂತ ಸಂಜ್ಞೆ ಕೊಟ್ಟು accelerator ಒತ್ತಿ ಲಾರಿಗಳನ್ನು ಹಿಂದೆ ಹಾಕತೊಡಗಿದರು! ಅವರ ಸಂಜ್ಞೆಯನ್ನು ಅನುಸರಿಸಿ ನಾನೂ ಸಹ ನನ್ನ ಜೀಪಿನ accelerator ಒತ್ತಿ ಹಿಂಬಾಲಿಸಿದೆ! ಬಯಲುಪ್ರದೇಶ ಬರುವ ಹೊತ್ತಿಗೆ ಲಾರಿಗಳ ವೇಗ ಇನ್ನೂ ಜಾಸ್ತಿ ಆಗಿತ್ತು! ನೂರು ಗಜ ಅಂತರ ಇಟ್ಟುಕೊಳ್ಳಲು ಆತುರ ಆತುರವಾಗಿ ಓಡುತ್ತಿದ್ದವು! ರಸ್ತೆ ಎಲ್ಲಾ ಧೂಳುಮಯ! ನಾನು ಲಾರಿಗಳನ್ನು ಹಿಂದೆ ಹಾಕುವ ಸಾಹಸದಲ್ಲಿ.... ಮುಂದೆ ರಸ್ತೆ ಮಗ್ಗುಲಲ್ಲಿ ಹಾಕಿದ್ದ ಜಲ್ಲಿ ಕಲ್ಲುಗಳ ರಾಶಿಗಳನ್ನು ಧೂಳಿನಿಂದಾಗಿ ಗಮನಿಸಲಿಲ್ಲ. ಇದ್ದಕ್ಕಿದ್ದಂತೆ ಬಲ ಚಕ್ರಗಳು ಜಲ್ಲಿರಾಶಿ ಹತ್ತಿದವು. ಜೀಪ್ dance ಮಾಡಲು ಆರಂಭಿಸಿತು... ರಸ್ತೆಯಲ್ಲಿ, ಲಾರಿಯ ಮುಂದೆ! ಹೇಗೋ ನಿಭಾಯಿಸಿಕೊಂಡು ಹೊರಟೆ... ಇದ್ದಕ್ಕಿದ್ದ ಹಾಗೆ ಜೀಪಿನಲ್ಲಿ ಏನೋ 'ಕಟಕಟ' ಅಂಥ ಶಬ್ದ ಷುರು ಆಯಿತು. ಏನೆಂದು ತಿಳಿಯಲಿಲ್ಲ. ರಸ್ತೆ ಮಗ್ಗುಲಲ್ಲಿ ನಿಲ್ಲಿಸಿ ನೋಡುವ ಅಂಥ ಪಕ್ಕಕ್ಕೆ ಕಣ್ಣು ಹಾಯಿಸಿದೆ. ಪಕ್ಕದಲ್ಲಿ ನನ್ನ ಡ್ರೈವರ್ ಕೂತಿದ್ದ! ಮುಖ ಬಿಳಿಚಿಕೊಂಡಿತ್ತು. ಅವನಿಗೆ ತಿಳಿಯದೆಯೇ ಅವನ ಕಾಲುಗಳು ಜೋರಾಗಿ ಜೀಪಿನ ಪಕ್ಕಕ್ಕೆ ಹೊಡೆಯುತ್ತಿದ್ದವು! 'ಕಟ ಕಟ' ಏನು ಅಂತ ಅರ್ಥವಾಯಿತು. ನನ್ನ ಸಮಾಧಾನಕರವಾದ ಮುಖ ನೋಡಿಯೋ ಏನೋ, ಡ್ರೈವರ್ ಬಾಯಿನಲ್ಲಿ ಮಾತು ಹೊರಟಿತು. 'ಸಾರ್.... ಏನು ಅನಾಹುತ ಆಗುವುದರಲ್ಲಿತ್ತು!?' ಅಂತ ಉದ್ಗರಿಸಿದ! 'ಏನೂ ಆಗಲಿಲ್ಲವಲ್ಲ... ಸಮಾಧಾನ ತಂದುಕೋ... ನೀನು ನನ್ನ ಸೀಟಿನಲ್ಲಿ ನಾನು ನಿನ್ನ ಸೀಟ್‌ನಲ್ಲಿದ್ದಿದ್ದರೆ ನಿನ್ನ ಘಾಬರಿಯಿಂದ ಇನ್ನೇನು ಅನಾಹುತ ಆಗಬಹುದಿತ್ತೋ ಎಂದು ಯೋಚಿಸಿ, ಸಂತೋಷಪಡು ಅಂದೆ!'

CEME, ಕ್ಯಾಪ್ಟನ್ ಜೀಪನ್ನು ತಲುಪುವುದರಲ್ಲಿ ಸಫಲರಾಗಿದ್ದರು ಕ್ಯಾಪ್ಟನ್ ''ಸರ್ ನಾನು ಯಾವಾಗಲೂ ಬಯಲು ಸೀಮೆಯಲ್ಲಿ ಚಲಿಸಬೇಕಾದ ಗತಿ ಮೀರಲಿಲ್ಲ' ಅಂದ!

'ಇರಬಹುದು ಆದರೆ ನೀನಿನ್ನೂ convoy leading ರೂಢಿಸಿಕೊಂಡಿಲ್ಲ. convoy ಎಷ್ಟು ಉದ್ದ ಇತ್ತು ಎಂದು ಯೋಚಿಸು ನೀನು. ಬಯಲು ಬಂದೊಡನೆಯೇ ವೇಗ ಹೆಚ್ಚಿಸಿದೆ. convoy ಹೇಗೆ ಬರುತ್ತಿದೆ ಎಂದು ತಿಳಿಯಲು ಮೋಟಾರ್ ಸೈಕಲ್ ಸವಾರನನ್ನು Despatch Rider - DR) ಬಳಸಿಕೊಳ್ಳಲಿಲ್ಲ. (ಆಗಿನ್ನೂ ನಮಗೆ ರೇಡಿಯೋ ಸೆಟ್‌ಗಳನ್ನು ಕೊಟ್ಟಿರಲಿಲ್ಲ). ನಿನ್ನ ಬೇಜವಾಬ್ದಾರಿಯಿಂದ ಏನು ಅನಾಹುತ ಬೇಕಾದರೂ ಆಗಬಹುದಾಗಿತ್ತು! ಇನ್ನು ಮುಂದೆ convoy ನಲ್ಲಿ ಒಂದು ವಾಹನ ತನ್ನ ಸ್ಥಾನ ಕಳೆದುಕೊಂಡರೂ ನಿನ್ನನ್ನು ಕ್ಷಮಿಸುವುದಿಲ್ಲ' ಅಂದರು... ಬಾಕಿದಾರಿಯನ್ನು convoy ಮಾದರಿ ರೀತಿಯಲ್ಲಿ ಪೂರೈಸಿತು!

ನಾನು ಇದುವರೆವಿಗೂ ಕೆಲವು ವ್ಯಕ್ತಿಗಳು, ಕೃತಕವಾಗಿ ಕಲ್ಪಿಸಿದ ಸಂದರ್ಭಗಳಿಗೆ ಹೇಗೆ ಸ್ಪಂದಿಸಿದರು ಎಂದು ತಿಳಿಸಲು ಪ್ರಯತ್ನಿಸಿದ್ದೇನೆ. ವ್ಯಕ್ತಿತ್ವ ಪರೀಕ್ಷೆಗೆ ಸೈನಿಕ ಜೀವನದಲ್ಲಿ ಸಾಕಷ್ಟು ಅವಕಾಶಗಳು ಸಿಗುತ್ತವೆ. ಅಭ್ಯಾಸದ ಸಮಯದಲ್ಲಿ ಒತ್ತಡಕ್ಕೆ ಸಿಕ್ಕಿ ಹೇಗೆ ನಡೆದುಕೊಳ್ಳುತ್ತಾರೆ, ನ್ಯೂನತೆ ಏನಿದೆ, ಅರ್ಹತೆ ಏನು ಎಂದೆಲ್ಲಾ ತಿಳಿಯಬಹುದು... ಈ ಪ್ರಸಂಗ ಮುಗಿಸುವುದಕ್ಕೆ ಮುಂಚೆ ನಿಜ ಜೀವನದಲ್ಲಿ ಸಹ ಯಾವುದಾದರೂ ಆಘಾತಕರ ಘಟನೆ ನಡೆದರೆ ವ್ಯಕ್ತಿ ಹೇಗೆ ಸ್ಪಂದಿಸುತ್ತಾನೆ ಎಂದು ತಿಳಿದುಕೊಂಡು ವ್ಯಕ್ತಿತ್ವದ ಅರಿವು ಮೂಡಬಹುದು ಎಂಬ ಅನಿಸಿಕೆಯನ್ನು ನಿದರ್ಶಿಸಲು ಪ್ರಯತ್ನಿಸುತ್ತೇನೆ.

ಇದು ನಮ್ಮ ಹೆಡ್ ಕ್ವಾರ್ಟರ್ಸ್‌ನಲ್ಲಿದ್ದ ಎರಡನೇ ಮೇಜರ್‌ಗೆ ಸಂಬಂಧಿಸಿದ್ದು. ಇವನು ತನ್ನ ಅಕಾಡಮಿ ದಿನಗಳಿಂದ ಸ್ವಲ್ಪ 'ತಿಕ್ಕಲ್' ಸ್ವಭಾವದವನು, 'ಜುಗ್ಗ' ಮೊಂಡ, ಪ್ರಪಂಚಜ್ಞಾನ ಇಲ್ಲದವನು ಎಂದೆಲ್ಲಾ ಬಿರುದುಗಳನ್ನೂ ತಡೆದಿದ್ದ. ನಮ್ಮ ಜೊತೆಯಲ್ಲಿ ಕೂಡ ಇಂಥಾ ವರ್ತನೆ ಕೆಲಬಾರಿ ಪ್ರದರ್ಶಿಸಿದ್ದ. ಅಂಥವನು ತನ್ನ ಮೇಲೆ ಅಕಸ್ಮಾತ್ ಎರಗಿದ ಸಂಕಟಕ್ಕೆ ಹೇಗೆ ಸ್ಪಂದಿಸಿದ ಅನ್ನುವುದಕ್ಕೆ ಕುತೂಹಲಕರವೂ ಹೌದು... ಆಶ್ಚರ್ಯಕರವೂ ಹೌದು.

ಬೇಸಿಗೆಯ ಒಂದು ರಾತ್ರಿ.... ಝಾನ್ಸಿ ಬೇಸಿಗೆ ಅಂದರೆ ಉರಿಬೇಸಿಗೆ... ಮನೆ ಒಳಗೆ ಮಲಗಲು ಅಸಾಧ್ಯ.. ಹೊರಗೆ ಆಕಾಶದ ಕೆಳಗೂ ಸಹ table fan, pedestal fan ಹಾಕಿಕೊಂಡು ಮಲಗಬೇಕಾಗಿತ್ತು. ಎಲ್ಲರ ಕಾಂಪೌಂಡ್ ದೊಡ್ಡದಾಗಿ, ಎಲ್ಲರ ಮನೆಯಕಲ್ಲೂ ಚಿಕ್ಕದಾದರೂ ಸ್ವಲ್ಪ ಲಾನ್ (lawn) ಬೆಳೆಸಿದ್ದುದರಿಂದಲೂ ಎಲ್ಲರೂ ರಾತ್ರಿ ಹೊತ್ತು ಹೊರಗೇ ನಿದ್ರಿಸುತ್ತಿದ್ದೆವು. ಆ ರಾತ್ರಿ ಸುಮಾರು 1-30 ಅಥವಾ 3 ಘಂಟೆ ಸಮಯ... ನಮ್ಮ DR ನನ್ನ ಮನೆಗೆ ಬಂದು ಘಾಬರಿ ಘಾಬರಿ ಆಗಿ 'ಸರ್, ಮೇಜರ್... ಸಾಹೇಬರಿಗೆ ಯಾರೋ ಚೂರಿ ಹಾಕಿಬಿಟ್ಟಿದ್ದಾರೆ' ಅಂತ ತಿಳಿಸಿದ. ನಮ್ಮ CEME ಊರಲ್ಲಿರಲಿಲ್ಲ. DR ಜೊತೆ ಮೇಜರ್ ಮನೆಗೆ ಹೋದೆ. ಅಷ್ಟು ಹೊತ್ತಿಗೆ ಆಸ್ಪತ್ರೆ ಸೇರಿದ್ದಾನೆಂದು ತಿಳಿಯಿತು. ಆಸ್ಪತ್ರೆಯಲ್ಲಿ ಆಪರೇಷನ್ ಥಿಯೇಟರ್ ಹೊರಗೆ ಅವನ ಹೆಂಡತಿ ಕುಳಿತಿದ್ದಳು. ಒಳಗೆ ಆಪರೇಷನ್ ನಡೆಯುತ್ತಿತ್ತು. ಬೆಳಿಗ್ಗೆ 5-6 ಘಂಟೆಗೆ

ಸರ್ಜನ್ ಹೊರಗೆ ಬಂದರು ''ನಾನು ಮಾಡುವಷ್ಟು ಮಾಡಿದ್ದೇನೆ ಕರುಳಿನಲ್ಲಿ ಹದಿನಾರು ರಂಧ್ರಗಳು ಆಗಿತ್ತು. ಮುಂದೆ ಏನಾಗುತ್ತೋ ನೋಡಬೇಕು'' ಅಂದರು. ಅಷ್ಟು ಹೊತ್ತಿಗೆ ಏನು ನಡೆಯಿತು ಎನ್ನುವುದನ್ನು ಮೇಜರ್ ಹೆಂಡತಿಯಿಂದ ಸ್ವಲ್ಪ ಸ್ವಲ್ಪವಾಗಿ ತಿಳಿದುಕೊಂಡೆ.

ರಾತ್ರಿ, ಹೊರಗೆ ಮಲಗಿದ್ದಾಗ ಮನೆ ಒಳಗೆ ಏನೋ ಸದ್ದಾಯಿತಂತೆ. ಗಂಡನನ್ನು ಎಬ್ಬಿಸಿದಳು. ಅವನು ಬಾಗಿಲ ಬಳಿ ಹೋಗುವ ಹೊತ್ತಿಗೆ ಒಬ್ಬ 'ಕರೀ' ಮನುಷ್ಯ ಬರೀ ಲಂಗೋಟಿ ಕಟ್ಟಿದ್ದವ, ಈಚೆ ಬಂದನಂತೆ ಮೇಜರ್ ಸಾಹೇಬ ಅವನನ್ನು ಹಿಡಿದು ಬಲವಾಗಿ ತಬ್ಬಿಕೊಂಡು 'ನೆರೆಹೊರೆಯವರನ್ನು ಕೂಗು' ಅಂತ ಹೆಂಡತಿಗೆ ಹೇಳಿದನಂತೆ ಕಾಂಪೌಂಡ್‌ಗಳು ದೊಡ್ಡದಾಗಿದ್ದುದರಿಂದ ಮನೆಮನೆಗೂ ಅಂತರ ಜಾಸ್ತಿ ಇತ್ತು. ಯಾರಿಗೂ ಕೇಳಿಸಲಿಲ್ಲ ಅಂಥ ಕಾಣುತ್ತೆ ಅಷ್ಟರಲ್ಲಿ ಆ ಮನುಷ್ಯ ನುಣುಚಿಕೊಂಡು, ಮೇಜರ್ ಹೊಟ್ಟೆಯನ್ನು ಕೈನಲ್ಲಿದ್ದ ಆಯುಧದಿಂದ ಬಗೆದು ಓಡಿಹೋದ.

ಹೆಂಡತಿ ಏನೂ ತೋಚದೆ ಅಳಲು ಶುರು ಮಾಡಿದಳು. ಮೇಜರ್ ಹೊರಗೆ ಬಂದಿದ್ದ ಕರುಳುಗಳನ್ನು ಹೊಟ್ಟೆಯೊಳಗೆ ದಬ್ಬಿ, ಹೊಟ್ಟೆಯನ್ನು ತನ್ನ ಕೈನಿಂದ ಭದ್ರವಾಗಿ ಹಿಡಿದುಕೊಂಡು ''ಅಳುವುದರಿಂದ ಏನೂ ಪ್ರಯೋಜನವಿಲ್ಲ... ನನ್ನ ಪ್ರಾಣ ಉಳಿಸಬೇಕು ಅಂದರೆ ಈಗಲೇ ಓಡು, ಎದುರು ಮನೆಯಲ್ಲೇ ಸರ್ಜನ್ ಇದ್ದಾರೆ... ವಿಷಯ ತಿಳಿಸು'' ಅಂದನಂತೆ! ಅವನ ಅದೃಷ್ಟಕ್ಕೆ ಸರ್ಜನ್ ಅದೇ ಸಾಯಂಕಾಲ ಟೂರ್‌ನಿಂದ ವಾಪಸ್ ಬಂದಿದ್ದರು ತಮ್ಮ ಕಾರಿನಲ್ಲಿ ತಕ್ಷಣ ಮೇಜರನ್ನು ಆಸ್ಪತ್ರೆಗೆ ಕೊಂಡೊಯ್ದರು.

ವಿಷಯ ತಿಳಿದ ಮೇಲೆ ನಾವುಗಳೆಲ್ಲಾ ಅವನು ಬದುಕುವುದು ಅಸಾಧ್ಯ ಅಂಥ ಅಂದುಕೊಂಡಿದ್ದೆವು. ಆಮೇಲೆ ಬದುಕಿದರೂ ಮೆಡಿಕಲಿ ಅನ್‌ಫಿಟ್ ಆಗಿ ಮನೆಗೆ ಹೋಗುತ್ತಾನೆ ಅಂತ ಅದುಕೊಂಡೆವು. ಆದರೆ ನಾಲ್ಕುವಾರ ಆಸ್ಪತ್ರೆ, ಆರುವಾರ ಸಿಕ್‌ಲೀವ್ ಮತ್ತೆ ಒಂದು ವಾರ ಮೆಡಿಕಲ್ ಬೋರ್ಡ್‌ಗಾಗಿ ಆಸ್ಪತ್ರೆ ಸೇರಿ, ಮೆಡಿಕಲಿ ಫಿಟ್ (AYE ONE) ಅಂತ ಝೂನ್ನಿಗೆ ವಾಪಸ್ ಬಂದ!

ಕೆಲ ಕಾಲ ಕಳೆದ ಮೇಲೆ ಕಳ್ಳ ಸಿಕ್ಕಿದ. ಪೋಲೀಸರಿಗೆ ಕೊಟ್ಟ ಹೇಳಿಕೆಯಲ್ಲಿ ''ಈ ಮೇಜರ್ ಸಾಹೇಬ ಒಬ್ಬ ಹುಚ್ಚ. ನನ್ನ ಎಣ್ಣೆ ಬಳಿದ ಮೈ ತಬ್ಬಿಕೊಂಡ... ನುಣುಚಿಕೊಳ್ಳಲು ಕಷ್ಟ ಆಗಲಿಲ್ಲ.. ತಪ್ಪಿಸಿಕೊಳ್ಳಲು ಕೈನಲ್ಲಿ ಕೊಕ್ಕೆಗಳಿದ್ದ (ಬೀಗ ಮುರಿಯಲು) ಚೂರಿ ಇತ್ತು... ಉಪಯೋಗಿಸಿದೆ''... ಅಂದನಂತೆ!

ಯಾವ ಹುತ್ತದಲ್ಲಿ ಯಾವ ಹಾವೋ... ಅಲ್ಲವೇ......

ಇಷ್ಟಾರ್ಥ ಸಿದ್ಧಿ

- ನಾಗೂಶ್ರೀ ಸೂರಿ

ಶಿವಾನಂದ ಮಧ್ಯಾಹ್ನ ಊಟ ಮುಗಿಸಿಕೊಂಡು ಮತ್ತೆ work bench ಹತ್ತಿರ ಬಂದಾಗ ಅವರಪ್ಪ ಅವನ ಹೆಸರಿಗೆ ಬರೆದಿದ್ದ ಕಾಗದ ಅಲ್ಲಿತ್ತು. ತುಂಬಾನೆ ಆಸೆ ಪಟ್ಟುಕೊಂಡು ಒಡೆದು ನೋಡಿದರೆ ಅವನಿಗೆ ನಿರಾಸೇನೆ ಕಾದಿತ್ತು.

''ನಿನಗೆ ಕನ್ಯೆ ಹುಡುಕೋ ಬಗ್ಗೆ ಆಗಿಂದಾಗ್ಗೆ ಬರೀತಾನೇ ಇರತೀಯ. ನಮಗೂ ನೀನು ಮದುವೆಯಾಗಿ ಸುಖವಾಗಿರೋದನ್ನ ನೋಡಬೇಕೂ ಅಂತ ಆಸೇನೆ. ಆದರೆ ಈಗಿನ ದುಬಾರಿ ದಿನಗಳಲ್ಲಿ ಅವಸರ ಪಟ್ಟುಕೊಂಡು ಮದುವೇ ಅಂತ ಧುಮುಕೋದು ಅಷ್ಟೊಂದು ಬುದ್ಧಿವಂತಿಕೆ ಅಲ್ಲ ಅನಿಸುತ್ತೆ, ನಮಗೆ. ಇನ್ನೂ ಒಂದು ಎರಡು ವರ್ಷ ನಿಧಾನ ಮಾಡು - ನಿನಗೂ ಆವಾಗ ಒಳ್ಳೆ ಗ್ರೇಡ್ ಬಂದಿರುತ್ತೆ.....''

ಮುಂದೇ ಓದೋಕ್ಕೆ ಬೇಜಾರಾಗಿ ಅದನ್ನ ಅಲ್ಲೆ ಹರಿದು ಬಿಸಾಕಿದ. ಅಲ್ಲ, ವಯಸ್ಸಿಗೆ ಬಂದ ಹುಡುಗ ದೂರಾ ಭಾರಾ ಇದ್ದಾನೆ, ಊಟ ತಿಂಡೀ ಅನ್ನೋದಕ್ಕೆ ಪರದಾಡತಾ ಇರತಾನೆ ಅನ್ನೋದನ್ನ ತಿಳಕೊಂಡು ಅವರೇ ಮುಂದುಗಾಲು ಹಾಕಿಕೊಂಡು ಬರಬೇಕಾದದ್ದು ಧರ್ಮ. ಆದ್ರೆ ಅವರು ಮಾಡತಾ ಇರೋದು? ಇವನೇ ನಾಚಿಕೆ ಬಿಟ್ಟು ನನಗೆ ಹೆಣ್ಣು ಹುಡುಕೀ ಅಂತ ಪದೇ ಪದೇ ಬರೀತಾ ಇದ್ರೂ, ಅವರು ಏನಾದರೂ ಕಾರಣ ತಕ್ಕೊಂಡು ವಿಷಯಾನ್ನ ಮುಂದಕ್ಕೇ ಹಾಕ್ತಾ ಇದಾರೆ. ಮೊದಲು ಹೇಳಿದ್ರು, ಬೆಂಗಳೂರಿನಲ್ಲಿ ಮನೇ ಸಿಕ್ಕೋದು ಕಷ್ಟ, ಹಾಗಾಗಿ ನಾವು ಇಲ್ಲಿ ಹೆಣ್ಣು ಹುಡುಕೋಕ್ಕೆ ಮೊದಲು ನೀನು ಅಲ್ಲಿ ಮನೆ ಹುಡುಕಿಕೋ ಅಂತ. ಅವರನ್ನ, ಇವರನ್ನ ಕಾಲು ಹಿಡಿದು ಒಂದು ಮನೇ ಅಂತ ಮಾಡಿ ವರ್ಷಕ್ಕೇ ಬಂತು. ಈಗ ಏನು ಹೇಳ್ತಾರೆ? ಇನ್ನೂ ಎರಡು ವರ್ಷ ತಡೀಬೇಕಂತೆ, ಆವಾಗ ತನಗೆ ಒಳ್ಳೇ ಗ್ರೇಡ್ ಬಂದಿರತ್ತಂತೆ - ಬಹುಶಃ ಆವಾಗ ನಾನು ಕಂಪನಿಗೆ ಜನರಲ್ ಮ್ಯಾನೇಜರ್ ಆಗಿರತೀನಿ ಅಂತಲೇನೋ ಅವರ ಭ್ರಮೆ? ಅಲ್ಲ, ಫಿಟ್ಟರ್ ಟ್ರೇಡ್‌ನಲ್ಲಿ ಅಪ್ರೆಂಟಿಸ್ ಟ್ರೈನಿಂಗ್ ಮಾಡಿಕೊಂಡು ಬಂದಿರೋನಿಗೆ ಇನ್ನು ಎರಡು ವರ್ಷದಲ್ಲಿ ಅದೇನು ಮಹಾ ಬಂದಿರತ್ತಂತೆ?

ಸಂಜೆ ಮನೆ ಹತ್ತಿರ ಬಸ್ಸಿಂದ ಇಳಿಯೋವಾಗಲೂ ಅವನಿಗೆ ತಲೇಲಿ ಬಿಸಿ ಇಳಿದಿರಲಿಲ್ಲ. ಅಪ್ಪ ಅಮ್ಮನ್ನ ಬಯ್ಕೊಂಡೇ ವಠಾರದ ಬಾಗಿಲವರೆಗೂ ಬಂದ. ಮಾಮೂಲು ಅಭ್ಯಾಸದ ಬಲ, ಪಕ್ಕದಲ್ಲಿದ್ದ ಕಸದ ತೊಟ್ಟೀಮೇಲೆ ಈವತ್ತು ಯಾವದು ಹೊಸಾ ಸಿನಿಮಾ ಪೋಸ್ಟರ್ ಅಂಟಿಸಿದ್ದಾರೆ ನೋಡೋಣ ಅಂತ ಕಣ್ಣು ಹಾಯಿಸಿದ. ಸಾಮಾನ್ಯವಾಗಿ ಆ ಟೆಂಟು ಸಿನಿಮಾದವನು ಅಲ್ಲಿ ಅಂಟಿಸ್ತಾ ಇದ್ದದ್ದು ''ನಾನ್ ಏನ್ ಪಿರಂದೇ'' ಅಂತಲೋ ಇಲ್ಲಾ ''ತೂಕ್ಕು ತುಕ್ಕಿ'' ಅಂತಲೋ ಯಾವದಾದ್ರೂ ತಮಿಳು ಸಿನಿಮಾದ್ದು ಪೋಸ್ಟರುಗಳು. ಶಿವಾನಂದ ಸಾಮಾನ್ಯವಾಗಿ ಸಿನಿಮಾ ನೋಡೋನೇ

ಅಲ್ಲ. ಅವರೂ ಆ ಪೋಸ್ಟರುಗಳನ್ನು ನೋಡೋದು ಒಂದು ಥರಾ ಅಭ್ಯಾಸ ಅಂತ ಹೇಳಬಹುದು - ನಾವು ಪೇಪರುಗಳಲ್ಲಿ Obituary notices ನೋಡ್ತೀವಲ್ಲ ಆ ಥರಾ.

ಆದರೆ ಈವತ್ತು ಯಾವುದೋ ಇಂಗ್ಲೀಷ್ ಪಿಕ್ಚರ್‌ದು ಹಾಕಿದ್ದಾನೆ. ಅದೆಂಥದೋ ""MAN WITH THE GOLDEN GUN" ಅನ್ನೋದ್ದರದಂತೆ. ಅದೆಂಥಾ ಸೀನು ಅಂತೀರ? ಒಬ್ಬ ಹೀರೋ, ಅವನ ಸುತ್ತ ಆರು ಜನ ಹುಡುಗೀರು- ನಾಲ್ಕು ಜನರು ಅವನಿಗೆ ತೆಕ್ಕೆ ಬಿದ್ದಿದ್ರೆ, ಇಬ್ಬರು ಅವನ ಕಾಲ ಹತ್ರ ಕೂತಕೊಂಡು ಅವನ ಮುಖಾನೆ ನೋಡ್ತಾ ಇದ್ದಾರೆ.

ಮನೇ ಒಳಗೆ ಹೋಗಿ ಕೂತ್ಕೊಂಡರೂ ಅವನಿಗೆ ಆ ಪೋಸ್ಟರ್ ಧ್ಯಾನ ಹೋಗಲಿಲ್ಲ. ಅಲ್ಲ, ನಾನು ಇಲ್ಲಿ ಒಂದು ಹುಡುಗೀಗೋಸ್ಕರ ಇಷ್ಟೊಂದು ಎಗರಲಾಡತಾ ಇರೋವಾಗ ಅವನಿಗೆ, ಆ ಹೀರೋಗೆ, ಆರು ಜನ ಹೇಗೆ ಸಿಕ್ಕಿರಬಹುದು? ಅವನೂ ಏನಾದ್ರೂ ಅವನ ಅಪ್ಪ ಅಮ್ಮಂದಿರಿಗೆ ಕಾಗದ ಬರೆದು ಅವರೂ ಜಾತಕಗಳನ್ನು ತರಿಸಿಕ್ಕೊಂಡು ನೋಡಿ ಅವನಿಗೆ ಅಷ್ಟೊಂದು ಜನಾನ್ನೂ ಕಟ್ಟಿ ಹಾಕಿರಬಹುದಾ? ಛೆ, ಅದು ಹ್ಯಾಗೆ ಸಾಧ್ಯ? ಅವನೂ ತನ್ನ ಥರಾ ಅಪ್ಪ ಅಮ್ಮನ್ನ ನಂಬಿಕೊಂಡು ಕೂತಿದ್ದಿದ್ರೆ - ಗೋವಿಂದ ಅಂತ ಆಗಿರೋದು. ಹಾಗಾದರೆ ಅವನ achievement ಎಲ್ಲ ಹ್ಯಾಗೆ ಆಗಿರಬಹುದು......?

ಹಾ, ಸ್ವಪ್ರಯತ್ನ - Self help!

ಹೌದು, ನಾನೂ ಇನ್ಮೇಲೆ ಹಾಗೇ ಮಾಡತೀನಿ. ಅಪ್ಪ ಅಮ್ಮನಿಗೋ ಮತ್ತೆ ಬೇರೆ ಯಾರಿಗೋ ಕಾಯ್ತಾ ಕೂತಿದ್ರೆ ಆಗೋ ಕೆಲಸಾ ಅಲ್ಲ ಇದು. ಆ ಹೀರೋ ಥರಾ ಆರು ಜನಾ ಸಿಗದೆ ಹೋದ್ರೂ at least ಒಬ್ಬಳಾದ್ರೂ ಸಿಗೊಲ್ಲವೆ?

ಆಯಿತು, ಆದರೆ ಯಾರನ್ನಾ ಅಂತ ಮನಸ್ಸಲ್ಲಿ ಇಟ್ಟುಕೊಂಡು ಪ್ರಯತ್ನ ಮಾಡೋದು? ವಠಾರದ ಸುತ್ತ ಮುತ್ತ ಅರ್ಧ ಮೈಲಿ ಫಾಸಲೇಲಿ ಯಾರೂ ಅಂಥವರು ಇಲ್ಲ. ಮತ್ತೆ, ಫ್ಯಾಕ್ಟರೀನಲ್ಲಿ, ಸ್ಟೆನೋಗಳು, ಟೈಪಿಸ್ಟುಗಳು ಅಂತ ಒಂದಿಷ್ಟು ಜನ ಲಕ್ಷಣವಾಗಿರೋ ಹುಡುಗೀರು ಇದ್ದಾರೆ. ಆದರೆ ಅವರೆಲ್ಲ ಈಗಾಗಲೆ Sold Out - ಆ ಕಂಪ್ಯೂಟರ್ ಸೆಕ್ಷನ್ ಮನೋಗರನ್, ಅಕೌಂಟ್ಸ್ ಆಫೀಸು ಸಿಂಗಾರವೇಲು ಅಂತ ಒಬ್ಬೊಬ್ಬಳಿಗೂ ಫ್ಯಾಕ್ಟರೀನಲ್ಲೇ ವರಗಳು ಸಿಕ್ಕಿಬಿಟ್ಟಿವೆ - ವರ್ಷದ ಕೊನೇಲೋ ಏನೋ ಅಂತೆ ಮದುವೆಗಳು.

ಅಂದರೆ ಏನಾಯಿತು? ಅಪ್ಪ, ಅಮ್ಮನ ನಂಬಿಕೊಂಡರೆ ಪ್ರಯೋಜನ ಇಲ್ಲ - ತಾನೇ ಟ್ರೈ ಮಾಡೋಣ ಅಂದರೆ ಮೆಚ್ಚಿಕೊಂಡೋರೆಲ್ಲಾ ಕೈ ಬಿಟ್ಟು ಹೋಗಿದ್ದಾರೆ. ಈಗ ಏನು ಮಾಡೋದು....?

ಥತ್ ನನ್ನ ಬುದ್ದೀಗಿಷ್ಟು! ಅಲ್ಲ, ಊರ ಜನ ಎಲ್ಲ ಹೋಗತಾ ಇರತಾರಲ್ಲ ಆ ಸೆಪ್ಪಿಂಗ್ಸ್ ರೋಡ್ ಓಣೀಲಿ ಇರೋ ಬಾಬಾ ಹತ್ರ ಹೋದ್ರೆ? ಹೋದೋರಿಗೆಲ್ಲ

ಅದೇನೋ ಭಸ್ಮಾನ ಮಂತ್ರಿಸಿ ಕೊಡತಾರಂತೆ. ರಾತ್ರಿ ಮಲಗೋಕ್ಕೆ ಮುಂಚೆ ಅದನ್ನ ಹಣೆಗೆ ಹಚ್ಚಿಕೊಂಡು ಇಷ್ಟಾರ್ಥ ಏನು ಅನ್ನೋದನ್ನ ಮೂರು ಸಲ ಹೇಳಿಕೋಬೇಕಂತೆ - ಹದಿನೈದು ದಿನ, ತಪ್ಪಿದರೆ ಮೂರು ವಾರ ಆಗೋ ಹೊತ್ತಿಗೆ ಅದು ಸಿದ್ಧಿ ಆಗೋ Process ಶುರುವಾಗತಂತೆ - ಇದು ಮೊದಲೇ ಜ್ಞಾಪಕಕ್ಕೆ ಬಂದಿದ್ದಿದ್ದರೆ - ಇಷ್ಟೆಲ್ಲ ಒದ್ದಾಟಾನೇ ಇರ್ತಿರಲಿಲ್ಲ!

ಸರಿ, ಧಡ ಭಡ ಅಂತ ಸೆಪ್ಪಿಂಗ್ಸ್ ರೋಡಿಗೆ ಓಡಿದ. ಬಾಬಾ ಅವರ ವ್ಯಾಪಾರ ಮಿಕ್ಕೋರ ಥರಾ ಇಲ್ಲ. ಎಲ್ಲಾ systematic - professionally run. ಬಾಗಿಲ ಹತ್ರ ಐವತ್ತು ರೂಪಾಯಿ ಕೊಟ್ರೆ ಒಂದು ರಸೀತಿ. ಅದನ್ನ ತಗೊಂಡು ಮುಂದೆ ಹೋದ್ರೆ ಭಸ್ಮದ ಪ್ಯಾಕೆಟ್ ಸಿಗತ್ತೆ. ಅದನ್ನ ಹಾಲಿನಲ್ಲಿ ಕೂತಿರೋ ಬಾಬಾ ಮಂತ್ರಿಸಿ ಕೊಡತಾರೆ. ಯಾರೂ ಏನೂ ಕೇಳಕೂಡದು. ಅವರೂ ಏನೂ ಹೇಳೋಲ್ಲ. ನೆಟ್ಟಗೆ ಹೊರಡತಾ ಇರಬೇಕು.

''ಸರ್, ಇದನ್ನ ಹಾಗೆuse ಮಾಡಬೇಕೂ ಅಂತ ತಿಳೀಲಿಲ್ಲವಲ್ಲ'' ಅಂತ ಶಿವಾನಂದ ಅಲ್ಲೇ ಇದ್ದ ಚೇಲಾ ಒಬ್ಬನ್ನ ಕೇಳಿದ.

''ಉಪಯೋಗಿಸೋ ವಿಧಾನ, expiry date ಎಲ್ಲಾ ಪ್ಯಾಕೆಟ್ ಮೇಲೇ ಬರದಿರತ್ತೆ - ಮನೇಗೆ ಹೋಗಿ ಓದಿಕೊಳ್ಳಿ.''

ಸರಿ, ಮನೆಗೆ ಬಂದ. ಆ ಪ್ಯಾಕೆಟ್ ಮೇಲೆ ಬರೆದಿದ್ದ ಥರಾನೆ ಮಲಗೋಕ್ಕೆ ಮುಂಚೆ ಕೈಕಾಲು ತೊಳಕೊಂಡು, ಭಸ್ಮಾನ ಹಣೇಗೆ ಹಚ್ಚಿಕೊಂಡು, ತನಗೆ ಏನು ಬೇಕೂ ಅಂತ ಇತ್ತೋ, ಅದನ್ನ ಜೋರಾಗಿ ಹೇಳಿಕೊಂಡು ಮಲಗಿಕೊಂಡ. ನಿದ್ದೇ ಬರೋ ತನಕ ಆ ಇಂಗ್ಲೀಷ್ ಪಿಕ್ಚರ್ ಪೋಸ್ಟರ್‌ದೇ ಯೋಚನೆ.

ಹೀಗೇ ಹತ್ತು ದಿನ ಆಗಿರಬಹುದೂ ಅಂತೀನಿ, ಒಂದು ದಿನ ರಾತ್ರಿ ಗೊರಕೇ ಹೊಡೀತಾ ಮಲಗಿದ್ದಾನೆ. ಯಾರೋ ಅವನನ್ನು ತಟ್ಟಿ ಎಬ್ಬಿಸಿದ ಹಾಗಾಯಿತು. ಎದ್ದು ನೋಡಿದರೆ ಯಾರೋ ಆಸಾಮಿ ಎದುರಿಗೆ ನಿಂತಿದ್ದಾನೆ. ಕಳ್ಳ ಗಿಳ್ಳ ಏನಾದ್ರೂ ಬಂದು ಬಿಟ್ಟಿದ್ದಾನಾ ಅಂತ ಒಂದು ನಿಮಿಷ ಭಯ ಆಯ್ತು. ಆದರೆ ಆ ಮೇಲೆ ಆ ಭಸ್ಮ ಹಚ್ಚಿಕೊಂಡು ಮಲಗಿದ್ದೆ ಅನ್ನೊ ವಿಷಯ ಜ್ಞಾಪಕಕ್ಕೆ ಬಂತು. ಹಾಗಾದರೆ ಇವನೇ ಇರಬೇಕು ಆ ಕೇಳಿದ್ದನ್ನ ಕೊಡೋ ದೇವ ಪುರುಷ.

''ವತ್ಸ, ಏನು ನಿನ್ನ ಕೋರಿಕೆ?''

''ಅದೇ ಆ ಪೋಸ್ಟರಿನಲ್ಲಿ ಇದ್ಯಲ್ಲ ಅದೇ ರೀತಿ...''

''ಸರಿ, ಸರಿ ಗೊತ್ತಾಯ್ತು. ನಿನಗೂ ಆ ಹೀರೋಗೆ ಸಿಕ್ಕ ಹಾಗೆ...?''

''ಹುಂ''

''ಆಯ್ತು, ಕೊಡೋಣಂತೆ. ಆದ್ರೆ ನಮ್ಮ transactions ಎಲ್ಲ in multiples of ten. ಅಂದ್ರೆ ಒಂದು, ಹತ್ತು, ಇಪ್ಪತ್ತು...... ಈ ರೀತಿ. ಇದುವರೆಗೂ maximum

ಕೊಟ್ಟಿರೋದು ಅಂದ್ರೆ, ಪುರಾಣದಲ್ಲಿ ಒಬ್ಬ ರಾಜ ಇದ್ದನಲ್ಲ ಅವನಿಗೆ, ನೂರು ಜನ. ನೀನು ಅಂದುಕೊಂಡಿರೋ ಥರಾ ಆರು ಜನಾನ್ನ ಕೊಡೊಕ್ಕೆ ಆಗೊಲ್ಲ - ಒಂದು ಕೇಳು, ಹತ್ತು ಕೇಳು, ಇಪ್ಪತ್ತು ಕೇಳು-''

''ಕೊಡೋದೇ ಕೊಡ್ತೀಯಂತೆ - ಇಪ್ಪತ್ತೇ ಕೊಟ್ಬು ಬಿಡು, Once for all"

''ಆಯಿತು, ಒಂದು ಕೆಲಸ ಮಾಡು - ನಿನಗೆ ಏನು ಬೇಕೂ ಅನ್ನೋದನ್ನ ಒಂದು ಚೀಟೀಲಿ ಬರೆದುಕೊಡು. ನಾನು ಅದರ ಮೇಲೆapproved ಅಂತ ಬರೆದುconcerned case worker ಗೆ ಕೊಡ್ತೀನಿ - ನಾರ್ಮಲ್ ಆಗಿ ಒಂದು ತಿಂಗಳು ಅನ್ನೋದ್ರ ಒಳಗೆ ನೀನು ಕೇಳಿದ್ದು ಬಂದು ಬಿಟ್ಟಿರತ್ತೆ - subject to availability of stocks"

ಸರಿ, ಅವನು ಹೇಳಿದ ಹಾಗೆ ತನಗೆ ಏನು ಬೇಕೂ ಅನ್ನೋದನ್ನ ಬರೆದು ಆ ಚೀಟೀನ ಆ ದೇವ ಪುರುಷನಿಗೆ ಕೊಟ್ಟ.

''ಇದೇನು, ಕನ್ನಡದಲ್ಲಿ ಬರಕೊಟ್ಟಿದ್ದೀಯ''

''ಯಾವ ಭಾಷೇನಲ್ಲಿ ಬರದ್ರೆ ಏನಂತೆ?''

''ನಿನ್ನ ಥಲೆ - ಈ ವಿಷಯಾನ್ನ ನೋಡಿಕೋತಾ ಇರೋನು ಪೊನ್ನು ರಂಗಂ. ಅವನಿಗೆ ಕನ್ನಡ ಬರೊಲ್ಲ. ತಮಿಳಿನಲ್ಲಿ ಬರಕೊಡು.''

''ನನಗೆ ತಮಿಳು ಬರೊಲ್ಲ''

''ಫ್ರೇಜರ್ ಟೌನ್‌ನಲ್ಲಿ ಇದ್ದೀರ, ತಮಿಳು ಬರಲ್ಲ ಅಂತೀಯ? ಹಾಗಾದರೆ ಇಂಗ್ಲೀಷಲ್ಲಾದರೂ ಬರೆದುಕೊಡು.''

''ನನಗೆ ಇಂಗ್ಲೀಷೂ ಅಷ್ಟು ಚೆನ್ನಾಗಿ ಬರೊಲ್ಲ. ಸುಡುಗಾಡು ಭಾಷೆ - ಅದರ spelling ಅರ್ಥವಾಗಲ್ಲ, ಯಾವನಿಗೂ.''

''ನಿಂಗೆ ಸ್ಪೆಲ್ಲಿಂಗ್ ಬರೋಲ್ಲ ಅನ್ನೋದಕ್ಕೆ ಆ ಇಂಗ್ಲೀಷನ್ನ ಯಾಕೆ ಬಯ್ಯುತ್ತೀಯ? ಆ ಪೊನ್ನು ರಂಗಂ ಕೂಡ, ನಿನ್ನ ಥರಾನೆ ಷೇಕ್ಸ್‌ಪಿಯರ್ - ಇಂಗ್ಲೀಷ್ ಜಾಸ್ತಿ ಬರದ್ರೆ ಏನೂ ಅಂತ ಗೊತ್ತಾಗಲ್ಲ. ನಿಂಗೆ ಏನು ಬೇಕೂ ಅನ್ನೋದನ್ನ ನಾಕು ಪದ ಬರೆದುಕೊಡು ಸಾಕು.''

''ಇಪ್ಪತ್ತು ಜನ ಹುಡುಗೀರು'' ಅನ್ನೋ ಅರ್ಥದಲ್ಲಿ ಇಂಗ್ಲೀಷ್‌ನಲ್ಲಿ ಬರೆದು, ಆ ಚೀಟೀನ ಆ ದೇವ ಪುರುಷನ ಕೈಗೆ ಕೊಟ್ಟ - ಅವನೂ ಅಲ್ಲೇನೇ Mr. Ponnurangam for n/a ಅಂತ ಅದರ ಮೇಲೆ ಬರೆದು ಜೇಬಲ್ಲಿಟ್ಟುಕೊಂಡು ಹೊರಟ.

ಆವಾಗಲಿಂದ ಷುರೂ ಆಯಿತು, ನಮ್ಮ ಶಿವಾನಂದನ waiting period. ಅಕಸ್ಮಾತ್ ಫ್ಯಾಕ್ಟರೀಗೆ ಹೋಗಿದ್ದಾಗ ಏನಾದ್ರೂ ಡೆಲಿವರಿ ತಗೊಂಡು ಬಂದು ಬಿಟ್ರೆ ಏನು ಮಾಡೋದು? ಹಾಗಾಗಿ ಒಂದೆರಡು ಸಾರಿ ಚಕ್ಕರ್ ಹಾಕಿ ಮನೇಲಿ ಕೂತದ್ದೂ ಆಯಿತು.

ಒಂದು ವಾರ ಕಳೀತು - ಉಹುಂ, no progress. ಎರಡು ವಾರ ಮುಗೀತಾ ಬಂತು,

ಪರಿಸ್ಥಿತಿ ಡಿಟ್ಟೋ. ಎಲ್ಲಾದ್ರೂ, date expiry ಆಗಿದ್ದ ಭಸ್ಮಾನ ಮತ್ತೆ ಪ್ಯಾಕ್ ಮಾಡಿ ಮಾರಾಟ ಮಾಡಿದ್ದಾರಾ, ಆ ಬಾಬಾ ಅವರ ಆಶ್ರಮದಲ್ಲಿ? ಛೆ, ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲುದ್ದ ನೀರೇ!

ಅವನಿಗೆ ಎಲ್ಲಾದರಲ್ಲೂ ಬೇಜಾರು ಈಚೀಚೆಗೆ. ಮುಂಚೆ ಅಂದ್ರೆ, ಎಲ್ಲಾದರೂ ಹೊರಗೆ ಹೋಗಬೇಕೂ ಅಂದ್ಕೊಂಡ್ರೆ, ನೀಟಾಗಿ ಗಡ್ಡ ಕೆರಕೊಂಡು, ಮೈಗೆಲ್ಲಾ ಸೆಂಟು ಪೂಸಿಕೊಂಡು ಇಸ್ತ್ರಿ ಮಾಡಿದ ಬಟ್ಟೆಗಳನ್ನ ಹಾಕಿಕೊಂಡು ಹೋಗ್ತಾ ಇದ್ದ. ಮನೇನ ಇಟ್ಟುಕೊಳ್ಳೋದರಲ್ಲೂ ಅಷ್ಟೆ. ವಾರಕ್ಕೊಂದು ಸಾರಿ ಇದ್ದ ಬದ್ದ ಸಾಮಾನನ್ನೆಲ್ಲ ಆಚೆಗೆ ಎಳೆದು ಹಾಕಿ, ಚೆನ್ನಾಗಿ ಧೂಳು ಕೊಡವಿ ಮತ್ತೆ ಒಪ್ಪವಾಗಿ ಜೋಡಿಸಿ ಇಡತಿದ್ದ. ಆ ಮೇಲೆ ಮನೇನೆಲ್ಲ ಚೆನ್ನಾಗಿ ಗುಡಿಸಿ, ಫಿನೈಲ್ ಹಾಕಿ ಸಾರಿಸಿ ಇಡತಿದ್ದ - ಹಲ್ಲಿ, ಜಿರ್ಲೆ ಅಂತ ಬರಬಾರದಲ್ಲ!

ಆದ್ರೆ ಅವಕ್ಕೆಲ್ಲ ಈಗ good bye. ಬಟ್ಟೆ ಬರೆ, ಊಟ ತಿಂಡಿ ಯಾವುದಾದರೂ ಸರೀನೆ, ಎಲ್ಲಾ ಅಷ್ಟಕ್ಕಷ್ಟೆ. ಯಾವುದೂ ಅಂದ್ರೆ ಅದೇ ಆಯಿತು - ಇಂಥಾದ್ದೇ ಬೇಕು ಅನ್ನೋ ಕಾಲ ಯಾವತ್ತೋ ಹೊರಟುಹೋಗಿತ್ತು.

ಮನೆ ಇಟ್ಟುಕೊಳ್ಳೋ ವಿಷಯದಲ್ಲೂ ಅಷ್ಟೆ. ಮುಂಚಿನ ಥರಾ ಇಲ್ಲವೇ ಇಲ್ಲ. ಎಲ್ಲಂದರೆ ಅಲ್ಲಿ ಒಗೆಯದೆ ಬಿದ್ದಿರೋ ಬಟ್ಟೆಗಳು, ಸಾಮಾನು ಗೂಡಿನ ಮೇಲೆ ಅರ್ಧ ಇಂಚು ಧೂಳು. ಕಸ ಗುಡಿಸೋದು, ಸಾರಿಸೋದು? ಕೇಳಲೇ ಬೇಡಿ.

ಸರಿ, ಮನೆ ಹೀಗಿದ್ದರೆ ಏನಾಗತ್ತೆ? ಪಕ್ಕದ ಮನೆಯಿಂದ ಅಂತ ಕಾಣತ್ತೆ ಒಂದಷ್ಟು ಜಿರಲೆಗಳು, ಅವನ್ನ ಹಿಡಿಯೋಕ್ಕೆ ಹಲ್ಲಿಗಳು, ಹೀಗೆ ಒಂದೊಂದಾಗಿ ಶುರೂ ಆಯಿತು. ಮುಂಚೆ ಅಂತ ಇದ್ದಿದ್ರೆ ಅವನ್ನ ನೋಡಿದ ತಕ್ಷಣ ಎಕ್ಕಡದಲ್ಲಿ ಹೊಡೆದ ಆಚೆಗೆ ಹಾಕಿ, ಆ ಮೇಲೆ ಸಾರಿಸಿ ಗುಡಿಸಿ ಮಾಡ್ತಾ ಇದ್ದ ಆದರೆ ಈವಾಗ? ಯಾವುದೂ ಬೇಡ, ಜಗವೇ ಮಾಯ ಅನ್ನೋ ಥರಾ.

ಒಂದು ದಿನ ಹೀಗೇ ಕೂತಿರಬೇಕಾದ್ರೆ ಯಾರೋ ಬಾಗಿಲು ತಟ್ಟಿದ ಹಾಗಾಯಿತು. ನೋಡಿದ್ರೆ ಒಬ್ಬ ಮುದುಕ ನಿಂತಿದ್ದಾನೆ. ಕೈನಲ್ಲಿ ಬಾಕ್ಸ್ ಫೈಲ್ ಅಂತಾರಲ್ಲ ಆ ಥರದ್ದು ಒಂದು, ದೊಡ್ಡದು.

''ನಮಸ್ಕಾರ ಸಾರ್! ಮಿಸ್ಟರ್ ಪೊನ್ನುರಂಗಂ ನನ್ನನ್ನ ಕಳಿಸಿದ್ದಾರೆ....''

''ಯಾವ ಪೊನ್ನುರಂಗಂ?'' ಶಿವಾನಂದನಿಗೆ ತಕ್ಷಣ ಜ್ಞಾಪಕಕ್ಕೆ ಬರಲಿಲ್ಲ.

''ಅದೇ ಸಾರ್, ನಿಮ್ಮ ಮನೆಗೆ ಬಂದಿದ್ರಲ್ಲ, ದೇವತಾ ಪುರುಷ, ಅವರ under ನಲ್ಲಿ case worker ಉ. ಎರಡು ವಾರದ ಹಿಂದೆ ನಿಮಗೆ ಅದೇನೋ ಕಳಿಸಿದ್ದಾರಂತಲ್ಲ, ಅದನ್ನ ನೀವು ok ಮಾಡಿದ್ದೀರಾ, ಹ್ಯಾಗೆ ಅಂತ ಕೇಳಿಕೊಂಡು ಬಾ ಅಂತ ನನ್ನನ್ನ ನಿಮ್ಮ ಹತ್ರ ಕಳಿಸಿದ್ದಾರೆ - ನಿಮ್ಮ written request ಪ್ರಕಾರ despatch ಬಂದಿದ್ರೆ, ನೀವು reject ಮಾಡೋ ಹಾಗಿಲ್ಲವಂತೆ.''

''ಗೋಲಿ ಹೊಡೀರಿ, ನಿಮ್ಮ ಪೊನ್ನುರಂಗಂಗೆ, ಆ ದೇವತಾ ಪುರುಷಂಗೆ. ತಿಂಗಳು ಮುಗಿಯೋದ್ರಲ್ಲಿ ನೀವು ಕೇಳಿದ್ದು ಬಂದಿರತ್ತೆ, ಅಂತ ಅಂಗೈನಲ್ಲಿ ಆಕಾಶ ತೋರಿಸಿ ಹೋಗಿ ತಿಂಗಳ ಮೇಲೇನೆ ಆಯ್ತಲ್ಲರೀ......''

''ಆಶ್ಚರ್ಯಾನೆ! ಎರಡು ವಾರದ ಕೆಳಗೇನೇ full quantity despatched as per approved written request ಅಂತ ಡೆಲಿವರಿ ಚಲನ್‌ನಲ್ಲಿ ಬರೆದಿದ್ದಾರೆ.''

''ಚಲನ್ ಮಾಡಿ ಫೈಲ್‌ನಲ್ಲಿ ಹಾಕಿಕೊಂಡ್ರೆ ಬಂತೇನ್ರಿ? ಎಲ್ರಿ ಮಾಲು?''

''ಈಗಾಗಲೇ ಡೆಲಿವರಿ ಆಗಿದೆ ಸಾರ್, ಸ್ವಲ್ಪ ತಡೀರಿ ನಿಮ್ಮ request ಇಲ್ಲೇ ಇರಬೇಕು .... ಹಾಂ, ಸಿಕ್ತು - ನೀವೇ ಸ್ವಲ್ಪ ಓದಿ ಹೇಳಿ ಸಾರ್, ನಾನು ಕನ್ನಡಕ ಮರೆತು ಬಂದಿದ್ದೀನಿ''

ಶಿವಾನಂದ ದೇವ ಪುರುಷನಿಗೆ ಬರೆದು ಕೊಟ್ಟಿದ್ದ ತನ್ನ ಚೀಟೀನ ಇಸಕೊಂಡು ಓದಿದ - ಎಲ್ಲಾ ಸರಿಯಾಗಿ ಇದ್ದ ಹಾಗಿತ್ತು. ಆದರೂ ಅನುಮಾನ - ಹಾಳು ಇಂಗ್ಲೀಷು ಬರದೋನಿಗೆ ಒಂದು ಅರ್ಥ ಅಂತ ಆಗಿದ್ರೆ, ಓದೋನಿಗೆ ಬೇರೇನೋ ಅರ್ಥಾನೆ ಆಗಿರತ್ತೆ. ಎಲ್ಲಿ ಎಡವಟ್ಟಾಗಿ ಹೋಗಿರಬಹುದು? ತಾನು ಮಾತ್ರclear ಆಗೇ ಬರೆದಿಲ್ಲವೆ,

""TWENTY NUMBERS GIRLES"



ಅಲೋಯನ್ಸ್ ಆಸೆ

- ಆನಂದ

ನಾನು ಕಾಫಿ ಕುಡಿಯುತ್ತಿದ್ದೆ. ಹೆಂಡತಿ ಪೇಪರ್ ಓದುತ್ತಿದ್ದಳು. ಅವಳು ಪೇಪರ್ ಸರಿಸಿ ''ಅಲ್ಲಾಂದ್ರೆ ನೀವೇಕೆ ಮಂತ್ರಿಗಳಾಗಬಾರದು'' ಎಂದಳು.

ಕಪ್ ಕೆಳಗೆ ಬಿದ್ದು ಒಡೆದು ಚೂರಾಯಿತು. ಅದಕ್ಕೇ ಹೆಚ್ಚು ಗಾಬರಿಯಾದಂತೆ ತೋರಿತು. ''ನಾನು ಪ್ರಾಮಾಣಿಕ. ಹೇಗೆ ಮಂತ್ರಿಯಾಗಲಿ?'' ಎಂದು ಕೇಳಿದೆ. ಒಂದು ತರಹ ಕಾನೂನಿನ ಒಡಕಿದೆ ಎಂಬಂತಹ ಪ್ರಶ್ನೆ ಎತ್ತಿದೆ. ''ಅದಿರಲಿ, ಈಗೇಕೆ ನಾನು ಮಂತ್ರಿಯಾಗಬೇಕು?'' ಎಂದು ಅವಳಿಂದ ತಿಳಿಯಲು ಪ್ರಶ್ನಿಸಿದೆ.

''ಈಗ ನಿಮಗೆ ಬರ್ತಿರೋ ಅಲೋಯನ್ಸ್ ನಮಗೆ ಸಾಕೇನ್ರೀ'' ಎಂದು ಕೇಳಿದಳು.

ನಾನು ಕೇಂದ್ರ ಸರ್ಕಾರದ ನೌಕರನಲ್ಲದ್ದರಿಂದ ''ಒಂದೆರಡು ದಿನ ತಾಳು ಪರಿಸ್ಥಿತಿ ಸುಧಾರಿಸುತ್ತದೆ'' ಎಂದು ಹೇಳಿ. ವೇತನ ಆಯೋಗದ ಇಂಪ್ರೂವ್ಡ್ ಶಿಫಾರಸ್ಸಿನ ಆಮಿಷ ಒಡ್ಡುವಂತಿರಲಿಲ್ಲ. ಆದುದರಿಂದ ನಾನು ಆಲೋಯನ್ಸ್ ಬಗ್ಗೆ ಏನೂ ಆಶ್ವಾಸನೆ ಕೊಡದೆ ಈಗ ಬರುತ್ತಿರುವುದು ಸಾಲದು ಎಂದು ಒಪ್ಪಿಕೊಂಡೆ. ಆದರೆ ಮಂತ್ರಿಯಾಗಬೇಕೇಕೆ?

''ನೋಡಿ, ಮುಖ್ಯಮಂತ್ರಿಯಾದರೆ ಅಥವಾ ಬರೇ ಮಂತ್ರಿಯಾದರೂ ಸಹ 30,000 ರೂಪಾಯಿ ಹೆಚ್ಚು ಆಲೋಯನ್ಸ್ ಬರುತ್ತದೆ'' ಎಂದು ನನ್ನ ಬಾಯಿನಲ್ಲಿ ನೀರೂರಿಸಿದಳು. ಆ ಸುದ್ದಿ ಪೇಪರ್‌ನಲ್ಲಿ ಬಂದಿದ್ದು ಅವಳ ಗಮನ ಸೆಳೆದಿತ್ತು.

ಅಂದರೆ ಪಾಪ ಈಗ ಮಂತ್ರಿಗಳೆಲ್ಲ ಹಳೇ ಅಲೋಯನ್ಸ್‌ನಲ್ಲೇ ಜೀವನ ಮಾಡ್ತಿರಬೇಕು ಎಂದುಕೊಂಡು 'ಅಯ್ಯೋ' ಎಂದು ಅನುಕಂಪ ತೋರಿದೆ.

''ಇಷ್ಟು ದಿನ ಪಾಪ ವರ್ಷಕ್ಕೆ ಕೇವಲ 20,000 ರೂಪಾಯಿ ಭತ್ಯೆಯಲ್ಲೇ ಜೀವನ ನಡೆಸ್ತಿದ್ದರಂತೆ ನೋಡಿ'' ಎಂದು ನನ್ನಂತೆ ಅನುಕಂಪ ತೋರಿ, ''ಅಂದರೆ ಅವರಿಗೂ ತಿಂಗಳ ಕೊನೇ ಅನ್ನೋದಿತ್ತಾ'' ಎಂದು ಕೇಳಿದಳು.

ಇದ್ದಿರಬಹುದೆ? ಅವರೂ ಸಹ ನನ್ನಂತೆ ತಿಂಗಳ ಕೊನೆಯಲ್ಲಿ ಸ್ನೇಹಿತರಿಂದ ಸಾಲ ಮಾಡುತ್ತಿರಬಹುದೆ? ತರಕಾರಿ ತರುವುದನ್ನು ನಿಲ್ಲಿಸಬಹುದೆ? ಹೋಟೆಲ್ ಹೋಗುವುದು ನಿಷಿದ್ಧ? ವೃಥಾ ಖರ್ಚು ಎಂದು ನಿತ್ಯ ಭವಿಷ್ಯದಲ್ಲಿ ಓದಿದಾಗ ಇನ್ನಷ್ಟು ಗಾಬರಿಯೆ ನನಗಾಗುವಂತೆ? ತಿಂಗಳ ಕೊನೆಯಲ್ಲಿ ನಡೆಯುವ ಮದುವೆಗಳು ಹೋಗುತ್ತಲೇ ಇರಲಿಲ್ಲವೆ? ಇನ್ನು ಮುಂದಾದರೂ ಅವರ ಪರಿಸ್ಥಿತಿ ಸುಧಾರಿಸಬಹುದು ಎಂದೆನಿಸಿತು. ಅಂದರೆ ಪಟೇಲರ ಸಂಜೆ ಹೊತ್ತು ಬೇರೆ.

(ಇನ್ನೂ ಚುರುಕಾದ?) ಬ್ರಾಂಡ್ ಉಪಯೋಗಿಸಬಹುದೆ? ಗಮನಾರ್ಹ ಪ್ರಶ್ನೆಯೂ ಕಾಡತೊಡಗಿತು. ಆದರೆ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ ಎಂದು

ಹೆಂಡತಿಗೆ ಖಡಾಖಂಡಿತವಾಗಿ ಹೇಳಿದೆ. ಏಕೆಂದರೆ ಸಿದ್ದರಾಮಯ್ಯನವರು ಈಗಾಗಲೇ ಡ್ರೆಸ್ ಮಾಡಿಕೊಂಡು ಸೈಡ್‌ವಿಂಗ್ಸ್‌ನಲ್ಲಿ ಕಾಯುತ್ತಾ ಇರುವುದು ನನಗೆ ತಿಳಿದಿತ್ತು.

''ಹೋಗಲಿ ಸೋಮಶೇಖರ್ ಜಾಗಕ್ಕೆ ಪ್ರಯತ್ನಿಸಿ'' ಎಂದಳು. ''ಮಂತ್ರಿಗಳಿಗೂ ಅಷ್ಟೇ ಅಲೋಯನ್ಸ್ ಹೆಚ್ಚಿದೆ'' ಎಂದು ಸೇರಿಸಿದಳು. ಅವಳಿಗೆ ಅಲೋಯನ್ಸ್ ಮುಖ್ಯವಾಗಿತ್ತು. ಪದವಿ ಅಲ್ಲ.

''ಬಿಎಸ್ಸೀಲಿ ನಾನು ಎರಡು ಸಲ ಫೇಲಾಗಿದ್ದು ನೀ ಮರ್ತೆಯೇನು'' ಎಂದು ನೆನಪಿಸಿದೆ.

''ನೀವೂ ಕಾಪಿ ಹೊಡೆಯಬೇಕಿತ್ತು'' ಎಂದಳು.

''ಮಂತ್ರಿ ಆಗಬಹುದು ಅಂತ ಕನಸು ಕಂಡಿರಲಿಲ್ಲವಲ್ಲ'' ಎಂದು ಸಮಾಧಾನ ಹೇಳಿದೆ.

''ಹೋಗಲಿ, ರಾಜ್ಯ ಮಂತ್ರೀನೋ ಉಪಮಂತ್ರೀನೋ ಆಗೋದಿಕ್ಕೆ ಟ್ರೈ ಮಾಡಿ ಅವರ ಭತ್ಯೆನೂ ಹೆಚ್ಚಿದೆ'' ಎಂದಳು.

ನಾನೇನೋ ಸಿದ್ಧ. ಆದರೆ ಮಂತ್ರಿಮಂಡಳದ ಪುನರ್‍ರಚನೆಯ ಸಮಯದಲ್ಲಿ ನನ್ನ ಹೆಸರು ಪಟೇಲರಿಗೆ ನೆನಪಿಸುವವರು ಯಾರು?

ಹೆಂಡತಿಯ ಆಸೆಯಂತೆ ನಾನೇನೋ ಮಂತ್ರಿಮಂಡಲ ಸೇರಲು ಸಿದ್ಧ. ಆದರೆ ಮಂತ್ರಿ ಮಂಡಲ ಪುನರ್‍ರಚನೆ ಸುಮಯದಲ್ಲಿ ನನ್ನ ಹೆಸರನ್ನು ನೆನಪಿಸುವವರು ಯಾರು?



ನಾನು ಚಿಕ್ಕೋನಾಗಿದ್ದಾಗಿನಿಂದ್ಲೂ ಇದೇ ಸುದ್ದಿ ಪೇಪರಿನಲ್ಲಿ!

'ಸುಳ್ಳೋಪಖ್ಯಾನ'

- ಬಿ.ಪಿ. ಕೋಡಿಬೆಂಗ್ರೆ

ಆಕಾಶದಿಂದ ಮಳೆ ಹೇಗೆ ಬೀಳುತ್ತದೆ? ಭೀಮನು ದುರ್ಯೋಧನನನ್ನ ಹೇಗೆ ಕೊಂದ? ಎರಡು ಪುಟಗಳಿಗೆ ಮೀರದಂತೆ ಉತ್ತರಿಸಿರಿ. ಎಂದು ಮೂರನೇ ತರಗತಿಯ ಮಕ್ಕಳಿಗೆ ಪ್ರಶ್ನೆ ಕೊಟ್ಟರಂತೆ. ಅದಕ್ಕೆ ಬುದ್ಧಿವಂತನಾದ ಹುಡುಗ ಹೀಗೆ ಉತ್ತರಿಸಿದ 'ಆಕಾಶದಿಂದ ಮಳೆ ಚಿರಿ, ಚಿರಿ, ಚಿರಿ, ಚಿರಿ, ಚಿರಿ...... ಅಂತ ಎರಡು ಪುಟ ಬರೆದು ಬೀಳುತ್ತದೆ ಅಂದನಂತೆ. ಹಾಗೇನೇ ಭೀನು ದುರ್ಯೋಧನನನ್ನ ಗದೆಯಿಂದ ದಡಾ, ದಡಾ, ದಡಾ, ದಡಾ.... ಎಂದು ಎರಡು ಪುಟ ಬರೆದು ಬಡಿದು ಕೊಂದನು ಎಂದು ಮುಗಿಸಿದ್ದನಂತೆ. ಈ ಪ್ರಶ್ನೆ ಮತ್ತು ಉತ್ತರ ಸತ್ಯದ ತಲೆಯ ಮೇಲೆ ಗದೆಯಿಂದ ಬಡಿದು ಹೇಳಿದ ಸುಳ್ಳಿನಂತೆ ಇರಬಹುದು. ಆದರೆ ಸುಳ್ಳು ಬರೆಯುವುದರ ಅನಿವಾರ್ಯತೆಯ ಕಡೆ ಬೆಳಕು ಚೆಲ್ಲುವ ಒಂದು ಚಿಕ್ಕ ಕತೆ.

ಹಾಗೆ ನೋಡಿದರೆ ಸುಳ್ಳು ಹೇಳದವರಾರು? ಸತ್ಯ ಹರಿಶ್ಚಂದ್ರನೊಬ್ಬನೇ ಸತ್ಯವಂತ ಎಂದರೆ ಅವನ ಬಗ್ಗೆ ಕತೆ ಬರೆದವರು ಸುಳ್ಳು ಬರೆದಿದ್ದರೆ? ಇಂತಹ ಸಂಶಯಗಳು ನಿತ್ಯ ಸುಳ್ಳು ಹೇಳುವವರಿಗೆ ಬರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಸುಳ್ಳು ಹೇಳುವುದು ಅಪರಾಧವಾದರೂ ಒಮ್ಮೊಮ್ಮೆ ಸುಳ್ಳು ಹೇಳುವುದು ಪುಣ್ಯದ ಕೆಲಸವೂ ಆಗುತ್ತದೆ ಎನ್ನುವುದಕ್ಕೆ ಸಾವಿರಾರು ದೃಷ್ಟಾಂತಗಳನ್ನು ನೀಡಬಹುದು. ಸುಳ್ಳು ಹೇಳಿಯೇ ಸೃಜನಶೀಲತೆಯನ್ನು ಉಳಿಸಿಕೊಂಡ, ತಮ್ಮ ಕಲ್ಪನಾ ಶಕ್ತಿಯನ್ನು ಬೆಳೆಸಿಕೊಂಡವರಿದ್ದಾರೆ. ಕಥೆ, ಕಾದಂಬರಿ, ನಾಟಕ, ಕವನ ಬರೆಯುವ ಜನರಿಗೂ ಸುಳ್ಳಿಗೂ ಒಂದು ಒಪ್ಪಂದ ಏರ್ಪಟ್ಟಿರುತ್ತದೆ. ಅದು ಕಲ್ಪನೆಯ ಸುಳ್ಳು, ಸತ್ಯವಾಗಲೂಬಹುದು, ಸುಳ್ಳಾಗಲೂ ಬಹುದು.

ಸತ್ಯ ಹೇಳಿದರೆ ಅದನ್ನ ಮರೆತುಬಿಡಬಹುದು. ಏಕೆಂದರೆ ಅದು ಯಾವಾಗಲೂ ಹಾಗೇನೇ ಇರುತ್ತದೆ. ಸುಳ್ಳು ಹೇಳಿದರೆ ಮರೆಯುವ ಹಾಗಿಲ್ಲ, ಸಂದರ್ಭ ಬಂದಾಗಲೆಲ್ಲಾ ನೆನಪಿಟ್ಟುಕೊಂಡು ಅದೇ ಸುಳ್ಳನ್ನು ಮತ್ತೆ ಸೃಷ್ಟಿಸಬೇಕು. ಒಂದು ಸುಳ್ಳನ್ನು ಹೇಳಿದರೆ ಅದನ್ನ ಸತ್ಯವನ್ನಾಗಿಸಲು ಸಾವಿರ ಸುಳ್ಳುಗಳನ್ನು ಹೇಳಬೇಕಾಗುತ್ತದೆ ಎಂದು ಸುಳ್ಳು ಹೇಳುವವರು ಹೇಳುತ್ತಾರೆ. ಕೋರ್ಟಿನಲ್ಲಿ ಸತ್ಯ ಹೇಳುವ ಸಾಕ್ಷಿಗಳೇ ಸಿಗುವುದಿಲ್ಲವಂತೆ.

ಒಬ್ಬ ಅಮಾಯಕ ಹೆಣ್ಣುಮಗಳನ್ನ ದುಷ್ಕರ್ಮಿಗಳು ಅಟ್ಟಿಸಿಕೊಂಡು ಬಂದರೆ ಆಕೆ ನನ್ನ ಮನೆಯಲ್ಲಿ ಆಶ್ರಯಕ್ಕಾಗಿ ಅಡಗಿ ಕುಳಿತಾಗ, ದುಷ್ಕರ್ಮಿಗಳು ಆ ಹೆಣ್ಣುಮಗಳನ್ನ ನೀವು ನೋಡಿದ್ದೀರಾ? ಎಂದಾಗ ಸತ್ಯ ಹರಿಶ್ಚಂದ್ರನ ಮೊಮ್ಮಗನಾದ ನಾನು ಏನು ಹೇಳಬೇಕು ಹೇಳಿ? ಸತ್ಯ ಹೇಳಿದರೆ ನನ್ನನ್ನ ಮನುಷ್ಯ ಅನ್ನುತ್ತಾರೋ? ಇಂತಹ

ಸನ್ನಿವೇಶಗಳು ಇಂದಿನ ಸುಳ್ಳು ಸಮಾಜದಲ್ಲಿ ಸಾವಿರಾರು ಬಂದೊದಗುತ್ತದೆ. ಸತ್ಯವಂತರಿಗಿದು ಕಾಲವಲ್ಲಾ! ಅನ್ನುವ ಪುರಂದರ ದಾಸರ ಮಾತು ಸಹಜವಾದದ್ದು. ಒಂದು ಕುಟುಂಬದ ಕತೆಯನ್ನೇ ತಕ್ಕೊಳ್ಳಿ. ಸತ್ಯಹೇಳಿದರೆ ಗಂಡ ಮನೆ ಖರ್ಚಿಗೆ ಏನೂ ಕೊಡುವುದಿಲ್ಲವೆಂದು ಗೊತ್ತಿದ್ದ ಹೆಂಡತಿ ದಿನಾ ಸ್ವಲ್ಪ ಸ್ವಲ್ಪ ಸುಳ್ಳು ಹೇಳಿ ಸುಳ್ಳಿನ ಮೊತ್ತದ ದೊಡ್ಡ ಸತ್ಯವನ್ನು ಸಂಸಾರದ ದೋಣಿ ಸುಗಮವಾಗಿ ಸಾಗುವಂತೆ ಮಾಡುತ್ತಾಳೆ.

ಒಮ್ಮೆ ಗಂಡ ಕುರಿಮಾಂಸ ತಂದಿಟ್ಟು ಅಡುಗೆ ಮಾಡಲು ಹೆಂಡತಿಗೆ ಹೇಳಿ ಹೊರಗೆ ಹೋದನಂತೆ. ಮನೆಕೆಲಸ ಮುಗಿಸಿ ಕುರಿಮಾಂಸ ನೋಡಲು ಹೆಂಡತಿ ಬಂದಾಗ ಮಾಂಸವನ್ನ ನಾಯಿ ತಿಂದು ಖಾಲಿ ಮಾಡಿತ್ತಂತೆ. ಗಂಡನಿಗೆ ಗೊತ್ತಾದರೆ ದೂರ್ವಾಸನ ಸಂತಾನದ ಆತ ತನ್ನನ್ನೇ ಕಡಿದು ಹಾಕುತ್ತಾನೆ ಅನ್ನೋ ಭಯದಿಂದ ಹೆಂಡತಿ ನಾಯಿಯನ್ನೇ ಕಡಿದು ಗಂಡ ಬರುವಾಗ ಬಡಿಸಲು ತಯಾರಾದಳಂತೆ. ಇದನ್ನೆಲ್ಲಾ ನೋಡುತ್ತಿದ್ದ ಪುಟ್ಟ ಮಗು ಯೋಚನೆ ಮಾಡಲು ಹತ್ತಿತಂತೆ ಹೇಳಿದರೆ ಅಪ್ಪ ಅಮ್ಮನನ್ನು ಕಡಿಯುತ್ತಾನೆ. ಹೇಳದಿದ್ದರೆ ಅಪ್ಪ ನಾಯಿ ಮಾಂಸ ತಿನ್ನುತ್ತಾನೆ. ಈಗ ಹೇಳಿ ಇಲ್ಲಿ ಸುಳ್ಳು ಬೇಕೋ, ಸತ್ಯ ಬೇಕೋ?

ಸುಳ್ಳು ಹೇಳಲು ಎಲ್ಲರಿಗೂ ಬರುವುದಿಲ್ಲ. ಸತ್ಯವನ್ನೇ ಸುಳ್ಳಿನಂತೆ ಹೇಳುವವರೂ ಇದ್ದಾರೆ. ಸುಳ್ಳನ್ನೇ ಸತ್ಯದಂತೆ ಹೇಳುವವರಿದ್ದಾರೆ. ಕೆಲವರಂತೂ ಅರ್ಧ ಸತ್ಯವೂ, ಅರ್ಧ ಸುಳ್ಳು ಹೇಳಿ ಒಟ್ಟಾರೆ ಗೊಂದಲ ಪುರುಷ, ಪುರುಷಿಯರಾಗಿ ಕೇಳುಗರಿಗೆ ಯಾವುದನ್ನ ನಂಬಬೇಕು, ಯಾವುದನ್ನ ಬಿಡಬೇಕು ಎಂಬುದೇ ಗೊತ್ತಾಗುವುದಿಲ್ಲ. ಸತ್ಯವನ್ನೇ ಮತ್ತೆ ಮತ್ತೆ ಮಾತನಾಡುತ್ತಾ ಇದ್ದರೆ ಅದನ್ನು ಸುಳ್ಳು ಅನ್ನುವವರಿದ್ದಾರೆ. ಮೈನಸ್ ಮೈನಸ್ ಸೇರಿ ಪ್ಲಸ್ ಆಗುವಂತೆ ಸುಳ್ಳು ಸುಳ್ಳು ಸೇರಿ ಸತ್ಯವಾಗುವ ಕಾಲವೂ ಇದೆ. ಸಮಯಕ್ಕೊಂದು ಸುಳ್ಳು, ದಿನಕ್ಕೊಂದು ಸುಳ್ಳು, ಬಾಯಿ ತೆಗೆದರೆ ಸುಳ್ಳು, ಹೇಗೆಲ್ಲಾ ಮಾತನಾಡುವವರಿದ್ದಾರೆ ಎಂಬುದು ಮಾತ್ರ ಸತ್ಯವಾದ ಸುಳ್ಳು ಎಂದು ತಿಳಿದುಕೊಳ್ಳಬೇಡಿ.

ಈಗೀಗ ಸಂಘ ಸಂಸ್ಥೆಗಳೂ ಸುಳ್ಳು ಹೇಳುವ ಸ್ಪರ್ಧೆಯನ್ನು ಇಟ್ಟಿರುತ್ತಾರೆ. ರಾಜರ ಕಾಲದ ಭಟ್ಟಂಗಿಗಳಿಗೆ ಸುಳ್ಳು ಹೇಳುವುದೇ ಉದ್ಯೋಗವಾಗಿತ್ತಂತೆ ರಾಜಾಧಿರಾಜ, ಬಹು ಪರಾಕ್.... ಅನ್ನುತ್ತಾ ಸತ್ಯ ಮಾತಾಡಲು ಯೋಚಿಸುವ ಅಗತ್ಯವೇ ಇರೋದಿಲ್ಲ. ಸುಳ್ಳು ಹೇಳುವಾಗ ಬಹಳ ಎಚ್ಚರವಿರಬೇಕು. ಚಿಂತಿಸಬೇಕು. ಸತ್ಯ ಹೇಳುವುದಕ್ಕಿಂತ ಸಾವಿರ ಪಾಲು ಕಷ್ಟ ಸುಳ್ಳು ಹೇಳುವುದು ಎಂದು ಸತ್ಯ ಹರಿಶ್ಚಂದ್ರನಿಗೇನು ಗೊತ್ತು ಹೇಳಿ? ಸತ್ಯ ಹೇಳಿದವ ಸತ್ತೇಹೋದ ಎಂದು ಸತ್ಯ ಹೇಳಿ ಸಮಾಧಿ ಸೇರಿದವರ ಸಂಘದ ಧ್ಯೇಯ ವಾಕ್ಯದಂತೆ ಅಂದ ಹಾಗೆ ಬದುಕಲು ಸುಳ್ಳು ಕೂಡಾ ಒಂದು ಅಸ್ತ್ರವಿರಬಹುದೇ ವಸ್ತ್ರದ ಹಾಗೆ?

ಅಣಕುವಾಡು

(ಶಿಶುನಾಳ ಶರೀಫರ ಕ್ಷಮೆ ಕೋರಿ)

- ಬೇಲೂರು ರಾಮಮೂರ್ತಿ

ಜನರನ್ನು ಜನರೇ ನುಂಗಿದಾ..ಽ...ಽ...ಽ...
ಕಥೆಯ ಕೇಳಿ
ಜನರನ್ನು ಜನರೇ ನುಂಗಿದಾ...ಽ....ಽ....ಽ...

ರೋಡು ಟಾರನು ನುಂಗಿ
ಟಾರು ರೋಡನು ನುಂಗಿ
ರೋಡು ಟಾರು ಎರಡೂ ಸೇರಿ
ಜನರನ್ನೇ ನುಂಗಿದಾ...ಽ...ಽ...ಽ...
ಕಥೆಯಾ ಕೇಳಿ.... ಕೇಳ್ರಪ್ಪ ಕೇಳಿ...
ಜನರನ್ನೇ ಜನರು ನುಂಗಿದಾ...ಽ....ಽ....ಽ....


ಪದಾರ್ಥವ ತೆರಿಗೆಯು ನುಂಗಿ
ತೆರಿಗೆಯ ರಾಜ್ಯವು ನುಂಗಿ
ರಾಜ್ಯ ತೆರಿಗೆ ಎರಡೂ ಸೇರಿ
ಜನರನ್ನೇ ನುಂಗಿದಾ.....ಽ....ಽ....ಽ...
ಕಥೆಯಾ ಕೇಳಿ.... ಕೇಳ್ರಪ್ಪ ಕೇಳಿ....
ಜನರನ್ನು ಜನರೇ ನುಂಗಿದಾ...ಽ....ಽ....ಽ...

ದೊಡ್ಡೋರು ಬಡವರ ನುಂಗಿ
ಬಡವಾರ ಬಡತನ ನುಂಗಿ
ದೊಡ್ಡೋರು ಬಡತನ ಎರಡೂ ಸೇರಿ
ಬಡವರನ್ನೇ ನುಂಗಿದಾ....ಽ....ಽ....ಽ....

ಕಥೆಯಾ ಕೇಳಿ... ಕೇಳ್ರಪ್ಪ ಕೇಳಿ....
ಜನರನ್ನು ಜನರೇ ನುಂಗಿದಾ....ಽ....ಽ...ಽ....

ಹಣವು ಪ್ರೀತಿಯ ನುಂಗಿ
ಪ್ರೀತಿಯು ನೀತಿಯ ನುಂಗಿ
ಪ್ರೀತಿಯೂ ಹಣವೂ ಕೂಡಿ ಹಾಡಿ
ಜನರನ್ನೇ ನುಂಗಿದಾ....ಽ....ಽ....ಽ...
ಕಥೆಯಾ ಕೇಳಿ... ಕೇಳ್ರಪ್ಪ ಕೇಳಿ....
ಜನರನ್ನು ಜನರೇ ನುಂಗಿದಾ....ಽ....ಽ...ಽ...

ಸುಳ್ಳು ಸತ್ಯಾವ ನುಂಗಿ
ಸತ್ಯ ಕಪಟಾವ ನುಂಗಿ
ಸುಳ್ಳು ಕಪಟ ಎರಡೂ ಸೇರಿ
ಜನರನ್ನೇ ನುಂಗಿದಾ....ಽ...ಽ...ಽ....
ಕಥೆಯಾ ಕೇಳಿ.... ಕೇಳ್ರಪ್ಪ ಕೇಳಿ
ಜನರನ್ನು ಜನರೇ ನುಂಗಿದಾ.....



ಕೋರ್ಟ್ ಕೇಸ್ ಮುಗಿಯೋವರೆಗೂ ಇಲ್ಲೇ ಇರಬೇಕು ಅಂತೀರಾ ಲಾಯರ್ ಸಾಹೇಬ್ರೇ?

ಮೇಡ್ ಫರ್ ಈಚ್ ಅದರ್

- ಎಂ.ಎನ್.ಕೆ.

ಭಾನುವಾರ ಬೆಳಿಗ್ಗೆ ಪೇಪರ್ ಓದುತ್ತಿದ್ದೆ. ಅಲ್ಲೇ ಕಾರ್ಪೆಟ್ ಮೇಲೆ ಪೇಪರ್ ಹರಡಿಕೊಂಡು ಓದುತ್ತಿದ್ದಳು ನನ್ನವಳು. ಇದ್ದಕ್ಕಿದ್ದಂತೆ ''ಇದ್ದರೆ ಹೀಗಿರಬೇಕಪ್ಪ'' ಅಂದಳು.

ನಾನು ಹೇಗೆ ಅಂತ ಕೇಳೋಥರ ಹುಬ್ಬೇರಿಸಿದೆ.

''ಇಸ್ತ್ಯಾಗೆ. ನಮ್ಮ ಲಾಲೂ - ರಬ್ರೀ ಥರ. ಎಷ್ಟು ಅನ್ಯೋನ್ಯ ಏನ್ಕಥೆ. ಬೇರೆಯವರೆಲ್ಲಾ ಯಾಕೆ ಹೀಗಿರಬಾರ್ದೂಂತ ಕೇಳ್ತೀನಿ'' ಅಂದ್ಲು.

''ಅಲ್ವೇ ಎಲ್ಲಾ ಪೇಪರ್ನೋರೂ ಅವರ್ನ ಕಾಲಂ-ಕಾಲಂ ತುಂಬ ಬೈತಿದ್ದಾರಲ್ಲಾ. ನೋಡ್ಲಿಲ್ವೇ ಇಲ್ನೋಡು ಇವತ್ತಿನ ಪೇಪರ್ಲಿ ಬಂದ ಕಾರ್ಟೂನು''

''ಅಯ್ಯೋ ಬಿಡ್ರೀ. ಈ ಪೇಪರ್ನೋರ್ಗೆ ಇನ್ನೇನು ಬೇರೇ ಕೆಲಸ. ಎಲ್ಲಾರ್ನೂ ಬೈಯ್ಯೋದೊಂದು ಬಿಟ್ಟು. ಈ ರಬ್ರಿ-ಲಾಲು ಜೋಡಿ ಒಳ್ಳೇ ಮೇಡ್ ಫರ್ ಈಚ್ ಅದರ್ ಥರ ಇದ್ದಾರಪ್ಪ. ಅದಕ್ಕೇ ಅವರ ಮೇಲೆ ಇವರಿಗೆಲ್ಲಾ ಬರೀ ಹೊಟ್ಟೇಕಿಚ್ಚು''

''ಅವರಿಬ್ಬರೂ ಮೇಡ್ ಫರ್ ಈಚ್ ಅದರ್. ಒಪ್ಕೋತೀನಿ. ಆದರೆ ಮೇಡ್ ಫರ್ ಬೀಹಾರ್ ಥರ ಇರೋಹಾಗೆ ಹಾಣ್ತಿಲ್ವಲ್ಲಾ. ನಮ್ಮ ಬಿಹಾರ ಬಡವಾಯ್ತಲ್ಲಾ''

''ಅಯ್ಯೋ ನಿಲ್ಲಿಸ್ರೀ ಸಾಕು. ನಾನೂ ನೋಡ್ತಾನೇ ಇದ್ದಿನಿ ಬೇರೇಯವರೆಲ್ಲಾ ಮಹಾ ಮಾಡಿದ್ದು. ಜೈಲಲ್ಲಿರೋ ಗಂಡನ್ನ, ಮನೇಲಿರೋ ಒಂಭತ್ತು ಮಕ್ಕಳನ್ನ ನಿಭಾಯಿಸ್ತಿರೋ ಆ ಮಹಾತಾಯಿ ಒಳ್ಳೇ ನೀರ್ಕುಡಿದಹಾಗೆ ನಿಭಾಯಿಸ್ತಾಳೆ ಆ ರಾಜ್ಯಾನ. ನೀವೂ ನೋಡ್ತಾಯಿರಿ'' ಅಂದ್ಲು.

''ಜೊತೇಗೆ ತಮ್ಮಂದಿರೂ ಇದ್ದಾರಂತೆ ಸಹಾಯಕ್ಕೇ'' ಅಂದೆ.

''ಇರಲೀ ಬಿಡಿ. ಅವರಲ್ದೇ ಇನ್ಯಾರು ಕಷ್ಟಕ್ಕಾಗ್ತಾರೆ ಹೆಂಗಸಿಗೆ'' ಅಂತ ದಬಾಯಿಸಿದಳು.

ಇನ್ನು ನಾನೇನಾದ್ರೂ ರಾಬ್ರೀ ಮತ್ತು ಅವಳ ತವರು ಮನೇ ತಮ್ಮಂದಿರ ಮೇಲೆ ಕಾಮೆಂಟ್ ಮಾಡಿ ಅದನ್ನ ಇವಳು ಅಪಾರ್ಥ ಮಾಡಿಕೊಂಡು ಇಲ್ಲದ ರಾಮಾಯಣ ಯಾಕೇಂತ ಸುಮ್ಮನಿದ್ದೆ. ಇರೋ ಒಂದು ಭಾನುವಾರ ಯಾಕೆ ಸುಮ್ನೇ ಗಲಾಟೇಂತ ಸುಮ್ಮನಾದೆ.

ನಾನು ಸುಮ್ಮನಾದ್ರೆ ಇವಳು ಸುಮ್ಮನಿರಬೇಕಲ್ಲಾ. ಸುಮ್ಮನಿರೋ ಜಾತಕಾನೇ ಅದು. ಅವಳೇ ತನ್ನ ವಿಕ್ಟರೀನ ಪ್ರೆಸ್ ಮಾಡ್ತಾ ''ಬೇರೇ ರಾಜ್ಯದ ಮು.ಮ. ಗಳೆಲ್ಲಾ ಇವರನ್ನ ನೋಡಿ ಕಲೀಬಾರ್ದ ಪಾಠಾನ. ತಮ್ಮ ತಮ್ಮ ಹೆಂಡತಿಯರಿಗೆ ಅಧಿಕಾರ ಕೊಟ್ಟು ತಾವು

ಹಾಯಾಗಿರಬಾರ್ದಾ. ಅಷ್ಟು ದೊಡ್ಡ ಬುದ್ಧಿ ಎಲ್ಲಿ ಬರುತ್ತೆ ಇವಕ್ಕೆ'' ಅನ್ನುತ್ತಾ ದೊಡ್ಡ ಉಸಿರು ಬಿಟ್ಟಳು.

''ಯಾಕೆ? ಯಲ್ಲಾ ರಾಜ್ಯದಲ್ಲೂ ತವರು ಮನೆ ಆಡಳಿತ ಬರಲೀಂತಾನಾ ನಿನ್ನ ಉಪಾಯ'' ಅಂದೆ.

''ಸಾಕ್ರೀ ನಿಮ್ಮ ಪರ್ಸನಲ್ ಕಾಮೆಂಟ್ಸ್. ನನ್ನ ಪಾಯಿಂಟ್ಗೆ ಉತ್ತರ ಹೇಳಿ'' ಅಂದ್ಲು.

''ಮಹಾತಾಯಿ. ನಮ್ಮ ಮಿಕ್ಕೆಲ್ಲ ಮು.ಮ.ಗಳು ಇನ್ನೂ ಹೊರಗೇ ಇದ್ದಾರಮ್ಮಾ. ಯಾರೂ ನಮ್ಮ ಲಾಲೂ ಥರ ಜೈಲಲ್ಲಿಲ್ಲವಲ್ಲಾ. ಬೇರೇ ರಾಜ್ಯಗಳಲ್ಲಿ ಹಸುಗಳಿಗೂ ಹಾಯಾಗೇ ಇವೆಯಲ್ಲಾ?''

''ಹಸು ಸ್ಕಾಮ್ ಒಂದೇ ಬೇಕಾ. ಬೇರಾವುದೂ ಸಿಗಲ್ವಾ, ಆನೆ, ಕುದುರೆ, ಎಮ್ಮೆ, ಹಂದಿ ಒಂದೇ ಎರಡೇ. ಸ್ಕಾಮ್ ಬೇಕಾದರೆ ಸಾವಿರಾರು ಇವೆ. ಯಾವುದಾದರೂ ಒಂದನ್ನ ಹಿಡಿದುಕೊಂಡು ಕೋರ್ಟಲ್ಲಿ ಪೀ.ಐ.ಎಲ್. ಹಾಕಿ ಇವರನ್ನೆಲ್ಲಾ ಕೆಳಗಿಳಿಸೋದಕ್ಕಾಗಲ್ವಾ?''

''ಹಾಕಮ್ಮಾ ಹಾಕು. ಧಾರಾಳವಾಗಿ. ಪೀ.ಐ.ಎಲ್., ಗೀ.ಐ.ಎಲ್. ಏನ್ಬೇಕಾದರೂ ಹಾಕ್ಕೋ. ಎಲ್ಲಾರ್ನೂ ಜೈಲಿಗೆ ಕಳಿಸು. ಸಧ್ಯಕ್ಕೆ ನನಗೆ ಈ ಜಂಬಲ್ ವರ್ಡ್ ಮಾಡೋಕೆ ಬಿಡು. ಮತ್ತೆ ಒಂದರ್ಧ ಲೋಟಾ ಥರ್ಡ್ ಡೋಸ್ ಕಾಫೀ ಗೀಫೀ ಏನಾದ್ರೂ ಸಿಗುತ್ತೋ...''

''ನಿಮಗೆ ಕಾಫೀ ಸಪ್ಲೈ ಮಾಡೀ ಮಾಡೀ ನನ್ನ ಕೈಕಾಲು ಬಿದ್ಹೋಯ್ತು. ಇದಕ್ಕೂ ಒಂದು ಪೀ.ಐ.ಎಲ್. ಇದೆಯಾ ಯಾರನ್ನರಾ ವಿಚಾರಿಸಬೇಕು'' ಅನ್ನುತ್ತಾ ಎರಡೂ ಕೈ ಊರಿಕೊಂಡು ನಿಧಾನವಾಗಿ ಮೇಲೆದ್ದಳು.

''ಈ ಕಾಫೀ ಸಪ್ಲೈಗೆ ಸ್ಟೇ ಆರ್ಡರ್ ಖಂಡಿತಾ ಸಿಗಲ್ಲ. ಪಾಪ ನಮ್ಮ ಘನವೆತ್ತ ನ್ಯಾಯಾಧೀಶರಿಗೂ ಬೇಕಲ್ಲ ಕಾಫೀ'' ಎಂದುಕೊಂಡು ನಾನೂ ಮೇಲೆದ್ದೆ.



ಮುಂದಿನ ಚುನಾವಣೆಯಲ್ಲಿ ನಮ್ಮ ಪಾರ್ಟಿ ಗೆದ್ದರೆ, ನಾನು ಸರ್ಕಾರದ ಹೊರಗೇ ಇದ್ದು ಬೆಂಬಲ ಕೊಡ್ತೀನಿ. ನಮ್ಮ ಪಾರ್ಟಿ ಸೋತರೂ ಸಹಾ ನಾನು ಹಾಗೇ ಮಾಡ್ತೀನಿ ಅಂತ ಘಂಟಾಘೋಷವಾಗಿ ಹೇಳಬಲ್ಲೆ

ಸುದ್ದಿ-ರದ್ದಿ-ಲದ್ದಿ

- ಬಾಗೂರು ಚಂದ್ರು

ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ ಎಲ್ಲಿಗೆ ಹೋಗಿದ್ದೆ ಎಂದಾಗ ಆ ಬೆಕ್ಕು ಲಂಡನ್ನಿಗೆ ಹೋಗಿದ್ದೆ ಎಂದು ಮೀಸೆ ತಿರುವಿದ್ದು, ಅಲ್ಲಿ ಏನು ನೋಡಿದೆ ಎಂದಾಗ ಮಹಾರಾಣಿಯ ಸಿಂಹಾಸನದ ಕೆಳಗೊಂದು ಪುಟ್ಟ ಇಲಿ ಇತ್ತು ಎಂದು ಉತ್ತರಿಸಿದ್ದು ಹಳೆಯ ಕತೆ. ಅದೇ ಲಂಡನ್ನಿನ - ಅಲ್ಲ ಅಲ್ಲ ಇಂಗ್ಲೆಂಡ್, ವೇಲ್ಸ್, ಸ್ಕಾಟ್ಲೆಂಡ್, ಐರ್‌ಲೆಂಡ್ ಹಾಗೂ ಹತ್ತಿರದ ದೂರದ ವಸಾಹತುಗಳು ಮಹಾರಾಣಿ ದೆಹಲಿಗೆ ಬಂದಾಗ ನಿಮ್ಮೂರು ಕೊಳಕು ಎಂದು ಇಂದರ್ ಪುತ್ರರ ಮುಂದೆ ಮೂಗು ಸಿಂಡರಿಸಿದ್ದು ಈಚಿನ ಸುದ್ದಿ. ದೆಹಲಿಗೆ ಬರುವ ಮುನ್ನ ಮಾತನಾಡಬಾರದ ವಿಷಯಗಳು ಎನ್ನುವ ಕಾಶ್ಮೀರ, ಪಾಕಿಸ್ತಾನ್, ನೆರೆಹೊರೆ ರಾಷ್ಟ್ರಗಳ ನಡುವೆ ಮಧುರ ಸಂಬಂಧ ಇತ್ಯಾದಿ ಇತ್ಯಾದಿಗಳ ದೊಡ್ಡ ಪಟ್ಟಿಯನ್ನು ರಾಣಿಗೆ ಕೊಟ್ಟಿದ್ದರಂತೆ. ಅದರಲ್ಲಿ ದೆಹಲಿಯ ಕೊಳಕು ಸೇರಿರಲಿಲ್ಲ ಎಂದು ವಿಷಯ ಅವರಾಗೇ ಎತ್ತಿರಬೇಕು ಅಥವಾ ಇಂದರ್ ಕುಮಾರರೇ ನಮ್ಮೂರು ಚಂದವೋ ನಿಮ್ಮೂರು ಚಂದವೋ ಎಂದು ಕೇಳಿರಬೇಕು. ಏನೇ ಆಗಲಿ ಇಂದರ್ ಕುಮಾರರ ಮುಖ ಪೆಚ್ಚಾಯಿತು.

ಇದೇ ದೆಹಲಿಯಲ್ಲಿ ನಾನು ಐವತ್ತು ವರ್ಷದಿಂದ ಇದ್ದೇನೆ. ನೀವು ಯಾರೂ ಇಲ್ಲಿ ಕೊಳಕಿದೆ ಎಂದು ನನಗೆ ಯಾಕೆ ಹೇಳಲಿಲ್ಲ ನನಗೆ ಗೊತ್ತಿಲ್ಲದ ರಹಸ್ಯ ಮೂರುದಿನ ಇರುಕ್ಕೆ ಬಂದ ಆ ರಾಣಿಗೆ ಹೇಗೆ ಗೊತ್ತಾಯಿತು ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರಂತೆ, ದೊಡ್ಡ ದೊಡ್ಡ ಅಧಿಕಾರಿಗಳು ಚಿಕ್ಕ ಚಿಕ್ಕ ಅಧಿಕಾರಿಗಳ ಮೀಟಿಂಗ್ ಕರೆದರು, ಬರ್ಫಿ ಸಮೋಸ ತಿಂದ ಪೇಪರ್ ಪ್ಲೇಟ್‌ಗಳು ಮುಂಚೆಯೇ ಅಷ್ಟೆತ್ತರ ಇದ್ದ ತಿಪ್ಪೆಯನ್ನು ಸೇರಿದವು. ಏಡೀಸ್ ಸೊಳ್ಳೆಗಳೂ ಸುಖವಾಗಿ ಸಂತಾನೋತ್ಪತ್ತಿ ಕಾರ್ಯ ಮುಂದುವರಿಸಿವೆ.

ನಮ್ಮ ದೆಹಲಿ ಕೊಳಕು ಎನ್ನಲು ಇನ್ನು ಯಾವ ಊರುತಾನೇ ಚೊಕ್ಕಟವಾಗಿದೆ? ಬೆಂಗಳೂರಿನಲ್ಲಿ ಅದೆಷ್ಟೋ ಸಾವಿರ ಟನ್ ಕಚಡಾ ರಸ್ತೆಗೆ ಬೀಳುತ್ತದೆ, ಅದರಲ್ಲಿ ಶೇಕಡ 60 ರಷ್ಟು ಸಾಗಿಸುವಷ್ಟು ಮಾತ್ರ ನಮ್ಮ ಹತ್ತಿರ ಲಾರಿಗಳಿರುವುದು ಎಂದು ಮಹಾನಗರದ ಮಹಾಪೌರರು, ಮಹಾ ಅದಕ್ಕಿಂತ ಮಹಾ ಅಧಿಕಾರಿಗಳು ಹೇಳುತ್ತಿದ್ದಾರೆ. ಸಾಗಿಸದೇ ಇರುವುದು ನಮ್ಮ ಬೀದಿಯಲ್ಲಿ ನಮ್ಮ ಮನೆಯ ಮುಂದೇನೆ ಏಕೆ ಉಳಿಯುತ್ತದೆ ಎಂದು ಎಲ್ಲಾ ಬೀದಿಗಳ ಎಲ್ಲಾ ನಾಗರಿಕರು ಕೇಳುತ್ತಿರುತ್ತಾರೆ.

ಇದೇ ಮಹಾರಾಣಿಯ ಲಂಡನ್ ನಗರದ ಬೀದಿಗಳು ಎಷ್ಟು ಚೊಕ್ಕಟ ಎನ್ನುವುದನ್ನು ಡಯಾನ್ ಶವಯಾತ್ರೆಯ ದಿನ ನಾವೂ ನೋಡಿದೆವು. ಅಲ್ಲಿಗೆ ಹೋಗಿ ಬಂದವರು ಹೇಳುತ್ತಾರೆ ಅಲ್ಲಿ ಎಲ್ಲಲ್ಲೂ ಪಿಸಿಗಳು ಇರುತ್ತವಂತೆ. ಪಿಸಿ ವೈಯಕ್ತಿಕ ವಿದ್ಯುನ್ಮಾನ ಗಣಕವಲ್ಲ ಸಾರ್ವಜನಿಕ ಶೌಚಾಲಯ. ಅಲ್ಲಿ ನೆಲ ಗೋಡೆಗಳ ಪಿಂಗಾಣಿ ಟೈಲ್‌ಗಳು

ಥಳಥಳ ಹೊಳೆಯುತ್ತಿರುವುದರ ಜೊತೆಗೆ ಕುಂಡದಲ್ಲಿರುವ ಗಿಡಗಳು, ಫ್ರೇಮ್ ಹಾಕಿದ ಕಲಾಕೃತಿಗಳ ಇಂಟರ್ನಲ್ ಡೆಕೊರೇಷನ್ ಸಹ ಇರುತ್ತದಂತೆ. ಹತ್ತಿರದ ಪಿಸಿ ಯಾವ ದಿಕ್ಕಿನಲ್ಲಿ ಎಷ್ಟು ದೂರದಲ್ಲಿದೆ ಎನ್ನುವ ಸೂಚನಾ ಫಲಕಗಳೂ ಇರುತ್ತವಂತೆ. ಇದನ್ನು ನೋಡಿಕೊಂಡು ಬಂದವರೊಬ್ಬರು ಹೊಸ ದೆಹಲಿಯಲ್ಲಿ ಎಷ್ಟೊ ವರ್ಷಗಳ ಹಿಂದೆ ಪಿಸಿಗಳನ್ನು ಕಟ್ಟಿಸಿದರು. ಆದರೆ ಜನಕ್ಕೆ ಅವಸರ, ಸಾರ್, ಜನ ಭಾರೀ ಬ್ಯುಜಿ ಒಳಕ್ಕೆ ಹೋಗುವುದಕ್ಕೆ ಪುರುಸೊತ್ತಿಲ್ಲ. ಹೊರಗಿನ ಗೋಡೆಯೇ ಸಾಕು. ಈಗ ಇಂತಹ ಪಿಸಿಗಳಿಂದ ಬರುವ ಗಬ್ಬುವಾಸನೆ ನಾನಿಲ್ಲಿದ್ದೇನೆ ಎಂದು ಹೇಳುತ್ತದೆ. ರಾಣಿಯ ಕಣ್ಣು ಅವರಿಗೆ ದೆಹಲಿ ಕೊಳಕು ಎಂದು ತೋರಿಸಿತೋ ಮೂಗೇ ತಿಳಿಸಿತೋ ಗೊತ್ತಿಲ್ಲ. ಹಳೇ ದೆಹಲಿಯಲ್ಲಿ ಎಲ್ಲಿ ಪಿಸಿ ಕಟ್ಟಲು ಹೊರಟರೂ ಇದೇ ಸ್ಥಾನದಲ್ಲಿ ಆ ಪ್ರಖ್ಯಾತ ಕವಿ ಅಥವಾ ಈ ಪ್ರಖ್ಯಾತ ಸಂಗೀತಕಾರನ ಮನೆಯಿತ್ತು ಎಂದು ಕೋರ್ಟಿನಿಂದಷ್ಟೇ ಬರುತ್ತದೆ. ಕಸ ಒಂದು ತರಹ ಹಿಂಸೆಯಾದರೆ ಅತಿ ಚೊಕ್ಕಟಕ್ಕೆ ಹೊಂದಿಕೊಳ್ಳುವುದು ಇನ್ನೊಂದು ರೀತಿಯಲ್ಲಿನ ಹಿಂಸೆ. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಪೂಜೆ ಮಾಡುವವರ ಸಂಬಂಧಿಕರು ಅಮೇರಿಕಾದ ವಿವಿಧ ದೇವಾಲಯಗಳಲ್ಲಿ ಅರ್ಚಕರಾಗಿದ್ದಾರೆ. ದೇವಕಾರ್ಯಕ್ಕೆ ಹೋಗುವವರಿಗೆ ಬೇರೆಯವರಿಗಿಂತ ಸುಲಭವಾಗಿ ವೀಸಾ ಸಿಗುತ್ತದಂತೆ. ಇಂತಹವರೊಬ್ಬರ ಮನೆಯಲ್ಲಿ ನಮ್ಮೂರಿನ ಕ್ಯಾಲೆಂಡರ್ ಅದರಲ್ಲಿ ಮಂಗಳವಾರದ ಎಂಗೇಜ್‌ಮೆಂಟ್‌ಗಳೆಲ್ಲಾ ತಿಂಗಳ ಒಂದನೆಯ ತಾರೀಕೇ ಭರ್ತಿ. ಮಂಗಳಗೌರಿ ವ್ರತ ಮಾಡುವ ಯಾವ ನವವಧು ಇಲ್ಲಿಗೆ ಎಲ್ಲಿಂದ ಬಂದಿದ್ದಾಳೆ ಎಂದು ಕುತೂಹಲದಿಂದ ಹತ್ತಿರ ಹೋಗಿ ನೋಡಿದಾಗ ಅಲ್ಲಿದ್ದದ್ದು ಗಾರ್ಬೇಜ್ - ಕಚಡಾ-ಕಚಡಾ ಎನ್ನುವ ಎಂಟ್ರೀಗಳು. ಪ್ರತಿ ಮಂಗಳವಾರ ಸೂರ್ಯೋದಯವಾದ ನಂತರ ಒಂದು ಶುಭವೇಳೆ, ಶುಭಕರಣ ಶುಭಲಗ್ನದಲ್ಲಿ ಕಚಡಾ ಸಾಗಿಸುವ ಲಾರಿ ಆ ಬೀದಿಗೆ ಬರುತ್ತದಂತೆ. ವಾರದ ಕಸವನ್ನು ಮೂರು ರೀತಿ ವಿಂಗಡಿಸಿ ಲಾರಿ ಕೊಕ್ಕೆಗೆ ಸಿಗುವ ಜಾಗದಲ್ಲಿ ಚೀಲಗಳಲ್ಲಿ ತುಂಬಿಟ್ಟಿರಬೇಕು. ಮರೆತರೆ ಇನ್ನೊಂದು ವಾರ ಈ ತಿಪ್ಪೆ ಮನೆಯೊಳಗೆ ಇರಬೇಕು. ಈ ವರ್ಗೀಕರಣಕ್ಕೆ ಕಠಿಣವಾದ ನಿಯಮಗಳಿವೆಯಂತೆ.

ಈ ನಿಯಮಗಳು ಎಮ್ಮೆ ಹಸುಗಳಿದ್ದ ಗ್ರಾಮೀಣ ಕುಟುಂಬದಿಂದ ಬಂದಿರುವ ಅರ್ಚಕರ ಹೆಂಡತಿಗೆ ಸುಲಭವಾಗಿ ಅರ್ಥವಾಗಿದೆ. ಊರಿನಲ್ಲಿ ಕಲಗಚ್ಚಿನ ಬಾನಿಗೆ ಹೋಗುತ್ತಿದ್ದ ನಿನ್ನೆರಾತ್ರಿ ಖರ್ಚಾಗದ ಅನ್ನ ಮಗು ಅರ್ಧ ತಿಂದು ಬಿಟ್ಟ ರೊಟ್ಟಿ, ಬಾಳೆಹಣ್ಣಿನ ಸಿಪ್ಪೆ, ಈರನಗೆರೆ ಬದನೆಕಾಯಿಯ ಹುಳಹಿಡಿದ ಭಾಗ ಮೊದಲವರ್ಗ. ಕಾಯಿಚಿಪ್ಪು, ಬೀದಿ ಗಿಡಗಳು, ಮನೆಗೆ ಕಳುಹಿಸುವ ಒಣಗಿದ ಎಲೆ ಇತ್ಯಾದಿ ಎರಡನೆಯ ವರ್ಗ. ಊರಿನಲ್ಲಿ ದುಡ್ಡು ಕೊಟ್ಟು ತೆಗೆದುಕೊಂಡು ಹೋಗುತ್ತಿದ್ದ ಹಳೆ ಪೇಪರ್ ಮೂರನೆಯ ವರ್ಗ. ನಗರದಲ್ಲಿ ಹುಟ್ಟಿ ಬೆಳೆದ, ಮನೆಯ ಎಲ್ಲಾ ಕಸವನ್ನು ಪಕ್ಕದ ಮನೆಯ ಮುಂದಕ್ಕೆಸೆಯುವ ಸತ್ ಸಂಪ್ರದಾಯ ಬೆಳೆಸಿಕೊಂಡಿದ್ದ ಸೊಸೆಗೆ ಈ ವರ್ಗೀಕರಣ ಇನ್ನೂ ಅರ್ಥವಾಗಿಲ್ಲ ಅವಳಿರುವುದು ಆರುನೂರು ಮೈಲಿಗಳ ದೂರದ ಇನ್ನೊಂದು ದೇವಸ್ಥಾನದಲ್ಲಿ. ಮೊನ್ನೆ ಪುಳಿಯೋಗರೆ ಮಾಡಿದ್ದಳಂತೆ ಅದರ ಬೈಪ್ರಾಡಕ್ಟ್

ಪುಣಸೇ ಚರಟ 'ಅ' ವರ್ಗಕ್ಕೆ ಸೇರುತ್ತದೆಯೇ ಇಲ್ಲ 'ಬ' ವರ್ಗಕ್ಕೆ ಎಂದು ಕೇಳಲು ರಾತ್ರಿ ಫೋನ್ ಮಾಡಿದ್ದಳಂತೆ.

ದೆಹಲಿಯಲ್ಲಿ ರದ್ದಿ ಸುದ್ದಿ ಮಾಡಿದ ಸಮಯದಲ್ಲೇ ಮೈಸೂರಿನಿಂದ ಲದ್ದಿ ಸಹ ಸುದ್ದಿ ಮಾಡುತ್ತಿತ್ತು. ಮೈಸೂರಿಗೆ ದಸರಾ ಸಂದರ್ಭದಲ್ಲಿ ಬಂದ ಆನೆಗಳ - ಸಾಕಷ್ಟು ದೊಡ್ಡಗಾತ್ರದ ಕೊಡುಗೆಯಿಂದ ಎಷ್ಟು ಹಣ ಬಂದಿದೆ ಅದು ಯಾವ ಲೆಕ್ಕದಲ್ಲಿ ಸರ್ಕಾರಕ್ಕೆ ಜಮಾ ಆಗಿದೆ ಎಂದು ಪತ್ರಕರ್ತರೊಬ್ಬರು ಪ್ರಶ್ನಿಸಿದ್ದರು. ಕಾಡಿನಲ್ಲಿದ್ದಾಗ ಆನೆಗಳು ಇತರ ಪ್ರಾಣಿಗಳು ಹೊರಗೆ ಹಾಕುವ ವಸ್ತು ಗೊಬ್ಬರವಾಗುತ್ತದೆ. ಆದರೆ ಮೈಸೂರಿನ ರಸ್ತೆಯಲ್ಲಿ ಅದು ಬಿಸ್ಕತ್ ಪ್ಯಾಕೆಟ್‌ನ ಬಳಿ ಪ್ಲಾಸ್ಟಿಕ್, ಚಿಪ್ಸ್ ಚೀಲದ ಬಣ್ಣದ ಪ್ಲಾಸ್ಟಿಕ್, ಮನೆಯಿಂದ ತಂದ ಪಾಲಿಥೀನ್ ಚೀಲಗಳ ಜೊತೆ ಕಸವಾಗಿರಬೇಕು. ಕಸದಿಂದ ರಸ ಎಂದು ಹಿಂದೆ ಕಾಂಪೋಸ್ಟ್ ಗೊಬ್ಬರದ ಪ್ರಚಾರ ಆಗುತ್ತಿತ್ತು. ಇಂದು ಪ್ಲಾಸ್ಟಿಕ್ ಕ್ರಾಂತಿಯಿಂದ ಈಗ ರೆಡಿಮೇಡ್ ಗೊಬ್ಬರ ಕಸವಾಗಿದೆ. ಫ್ಯಾಕ್ಟರಿ ಗೊಬ್ಬರಕ್ಕೆ ಅಷ್ಟೊಂದು ಸಬ್‌ಸಿಡಿ - ಸುಲಭ ಬೆಲೆ ಆದರೆ ಇನ್ನು ಏನು ಆಗಲು ಸಾಧ್ಯ?



ಒಳಗೇ ಇರೋದು ವಾಶಿ, ಅಲ್ಲವೇನ್ಲಾ?

ರಿಟೈರ್ಮೆಂಟು.....

- ಹೆಚ್. ಗೋಪಾಲಕೃಷ್ಣ

ನೀವು ಸಂಬಳ ತಗೊಳೋ ಕಡೆ ಹೇಗೋ ನನಗೆ ತಿಳೀದು. ನಿಮ್ಮಲ್ಲಿ ರಿಟೈರ್‌ಮೆಂಟ್ ಹೇಗೆ ಅಂಬೋದು ನನಗೆ ಗೊತ್ತಿಲ್ಲ. ನಾನು ಸಂಬಳ ತೆಗೆದುಕೊಳ್ಳುವ ಕಡೆಯಲ್ಲಂತೂ ನಿವೃತ್ತಿ ಅಂದರೆ ರಿಟೈರ್ ಮೆಂಟ್‌ದು ಒಂದು ರೀತಿ ಯೂನಿಫಾರಮ್ಮು. ಫ್ಯಾಕ್ಟರಿಯಲ್ಲಿ ಅದೂ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ಕಾರ್ಖಾನೆ ಆದ್ದರಿಂದ ಸೈನಿಕರ ಹಾಗೆ ಕೆಲವು ಯೂನಿಫಾರಮ್ ನಿಯಮಗಳು ಇಲ್ಲಿವೆ. ಅದರಲ್ಲಿ ಈ ನಿವೃತ್ತಿಯೂ ಸಹ.

ನೀವು ಒಂದನೇ ತಾರೀಖೇ ಹುಟ್ಟಿರಿ ಅಥವಾ ಮೂವತ್ತೊಂದನೇ ತಾರೀಖೇ ಹುಟ್ಟಿರಿ, ಆ ತಿಂಗಳ ಕಡೇ ದಿನ ನಿಮಗೆ ಐವತ್ತೆಂಟು ಆಗ್ತಿದ್ದಹಾಗೇ ರಿಟೈರು! ತಿಂಗಳ ಕಡೇ ದಿವಸ ಹುಟ್ಟಿದಾತ ಅಂತ ಒಂದೇ ಒಂದು ದಿನ ಕನ್ಸಿಡರೇಷನ್ ಇಲ್ಲ. ನನಗಂತೂ ಕೆಲವರ ಹುಟ್ಟಿದ ದಿನಾಂಕ ಕೇಳಿ ಅವರಿಗೆ ''ತುಂಬಾ ಲಕ್ಕಿ ನೀವು ತಿಂಗಳ ಮೊದಲಲ್ಲೆ ಹುಟ್ಟಿದೀರಿ. ತಿಂಗಳ ಪೂರ್ತಿ ಸಂಬಳ ತಗೋಬಹುದು- ಅಂದರೆ ತಿಂಗಳ ಕೊನೇಲಿ ಹುಟ್ಟಿದವರಿಗೆ ಬೇರೆ ರೀತಿ ಲಕ್ಕಿ ಅಂತ ಹೇಳುವ ಅಭ್ಯಾಸ! ತಿಂಗಳ ಕೊನೇಲಿ ಹುಟ್ಟಿದಿರಿ. ತುಂಬಾ ಒಳ್ಳೇದು. ಇಲ್ಲಾಂದರೆ ಕಾರ್ಖಾನೆಗೋಸ್ಕರ ಹೆಚ್ಚು ದುಡೀಬೇಕಿತ್ತು...'' ಅಂತ ಸಮಸ್ಯೆಯ ಆಮುಖ ತೋರಿಸುವ ಬುದ್ಧಿವಂತಿಕೆ ತೋರಿಸುತ್ತೇನೆ.

ಇದುವರೆಗೆ ಅದೆಷ್ಟೋ ಜನ ನಿವೃತ್ತರಾಗಿದ್ದಾರೆ. ನಾನು ಈ ಕಾರ್ಖಾನೆ ಸೇರಿದ ಮೇಲೆ. ಅವರಲ್ಲಿ ನೂರಕ್ಕೆ ತೊಂಬತ್ತರಷ್ಟು ಜನ ''ನನ್ನ ವಯಸ್ಸನ್ನು ನಮ್ಮ ತಂದೆ ತಾಯಿ ಸರಿಯಾಗಿ ನೀಡಿಲ್ಲ'' ಎಂದು ಕೊರಗಿಯೇ ಹೋಗಿರುವುದು. ''ನನ್ನ ಜತ ಸೇರಿದವರಿಗೆಲ್ಲಾ ಇನ್ನೂ ಆರೇಳು ವರ್ಷ ಸಮೀಪಿಸಿದೆ. ನನ್ನ ಪಾಡು ನೋಡಿ ಹೀಗಾಗಿದೆ'' ಎಂದು ಮೊನ್ನೆ ನಿವೃತ್ತನಾದ ಒಬ್ಬ ಪರಿತಪಿಸಿದ.

'ಯಾಕೆ ಇವ್ರೆ, ಏನಾಯಿತು?' ಅಂದೆ

'ಅದೇ ಸಾರ್ ನಮ್ಮಪ್ಪ ಮಾಡಿದ ತಪ್ಪು...'

'ಅಂದರೆ ನಿಮ್ಮಪ್ಪ ಇನ್ನೂ ಆರು ವರ್ಷದ ನಂತರ ನೀವು ಈ ಜಗತ್ತಿಗೆ ಬರುವ ಹಾಗೆ ನೋಡಿಕೊಳ್ಳಬೇಕಿತ್ತೇ?'

'ಹಾಗಲ್ಲಾ ಸಾರ್ ನಾನು ಹೇಳಿದ್ದು, ಅದು ಹೇಗಾಯಿತು ಅಂದರೆ ನಾನು ಎಸ್ಸೆಲ್ಸಿ ಕಟ್ಟಿದಾಗಲೆ ನಮ್ಮ ಹೆಡ್ಮೇಸ್ಟರು ನನ್ನನ್ನ ಕರೆದು ನಿಂದು ಡೇಟ್ ಆಫ್ ಬರ್ತ್ ಜಾಸ್ತಿ ಇದ್ದಹಾಗಿದೆ. ನಿಮ್ಮಪ್ಪಂಗೆ ಹೇಳಿ ಸರಿಮಾಡಿಸಿಕೊಂಡು ಬಾ ಅಂತ ಒಂದು ಅಪ್ಲಿಕೇಶನ್ ಕೊಟ್ಟರು. ನಮ್ಮಪ್ಪಂಗೆ ಅದನ್ನ ತಂದುಕೊಟ್ಟರೆ ಸರಿಯಾಗಿದೆ ಹೋಗೋ ಅಂದುಬಿಟ್ಟ. ಏನೂ ಎಜುಕೇಷನ್ನೇ ಇಲ್ಲ ಅವನಿಗೆ. ಆದರಿಂದ ಈಗ ನೋಡಿ ಆರುವರ್ಷ ಮೊದಲೇ ರಿಟೈರ್ ಆಗ್ತಿದೀನಿ. ಅಂತ ಇವನ ಗೋಳು. ಈತ ಆರು ವರ್ಷ ಮೊದಲೇ ಹುಟ್ಟಿದಾನೆ

ಅಂತ ಸ್ಕೂಲಿಗೆ ಸೇರಿಸಿಬಿಟ್ಟದ್ದರಂತೆ!

ಗಂಡ ಹೆಂಡತಿ ಇಬ್ಬರೂ ನಮ್ಮ ಕಾರ್ಖಾನೇಲೇ ಕೆಲಸ ಮಾಡುವ ಜೊತೆಗಳು ಅದೆಷ್ಟೋ ಇವೆ. ಈ ಡೇಟ್ ಆಫ್ ಬರ್ತ್ ತಾಪತ್ರಯದಿಂದಾಗಿ ಎಷ್ಟೋ ಬಾರಿ ಹೆಂಡತಿ ಸರ್ವೀಸಿನಿಂದ ರಿಟೈರ್ ಆದರೂ ಗಂಡ ಇನ್ನೂ ಸರ್ವೀಸಿನಲ್ಲಿರುತ್ತಾನೆ. ಈ ಹೇಳಿಕೆಗೆ ಪೂರಕವಾಗಿ ಹಲವಾರು ಸತ್ಯಕತೆಗಳು ನಮ್ಮ ಕಾರ್ಖಾನೇಲಿ ಇವೆ. ಅವುಗಳಲ್ಲಿ ಕೆಲವು: ಗಾರೆ ಕೆಲಸ ಮಾಡುವ ಒಬ್ಬಾತನ ಹೆಂಡತಿ ಸಹ ನಮ್ಮ ಕಾರ್ಖಾನೆ ಉದ್ಯೋಗಿ. ಅವರ ಮಗ ಸಹ ನಮ್ಮಲ್ಲೇ ಗಾರೆ ಕೆಲಸದವನು. ಈತನ ಅಮ್ಮ ಮೊದಲು ರಿಟೈರ್ ಆದಳಂತೆ. ಅದರ ನಂತರ ಆಕೆಯ ಮಗ ರಿಟೈರ್ ಆದನಂತೆ! ಅಪ್ಪನಿಗೆ ರಿಟೈರ್ ಆಗಿದ್ದು ಇವರಿಬ್ಬರೂ ರಿಟೈರ್ ಆದ ಎಂಟು ವರ್ಷದ ನಂತರವಂತೆ!

ಮತ್ತೊಂದು ಕತೆ. ಒಂದೂವರೆ ವರ್ಷ ಸರ್ವೀಸಿದೆ ಅನ್ನಬೇಕಾದರೆ ಒಬ್ಬಾಕೆ ಸ್ವಯಂ ನಿವೃತ್ತಿ ತಗೊಂಡಳು. ಎಲ್ಲರಿಗೂ ಹೇಳಿದ್ದು ಇನ್ನೂ ಹತ್ತು ವರ್ಷ ಸರ್ವೀಸಿದೆ ಅಂತ! ಹತ್ತು ವರ್ಷ ಸಣ್ಣವಳಾಗಿ ಕಾಣಿಸಲು ಬಣ್ಣ ಗಿಣ್ಣ ಸವರಿಕೊಂಡೇ ಬರುತ್ತಿದ್ದಳಂತೆ. ಸ್ವಯಂ ನಿವೃತ್ತಿ ಯಾಕೆ ತಗೊಂಡಳು ಎಂದು ಪತ್ತೇದಾರಿಕೆ ನಡೆಸಿದವರು ನಂತರ ಪತ್ತೆ ಮಾಡಿದ್ದು - ಗಂಡನಿಗಿಂತ ಮೊದಲೇ ರಿಟೈರ್ ಆಗ್ತಾ ಇದ್ದಾಳಂತ್ರೀ ಎಲ್ಲರಿಗೂ ವಯಸ್ಸು ತಿಳಿಯುತ್ತೆ ಅಂತ ವಾಲಂಟರಿ ರಿಟೈರ್‌ಮೆಂಟ್ ತಗೊಂಡಳು!

ಕರ್ನೂಲಿನ ಕಡೆಯಿಂದ ಬಂದವರೊಬ್ಬರು ನನಗೆ ಕಾರ್ಖಾನೇಲೇ ಗೆಳೆಯರಾಗಿದ್ದರು. ಅವರು ಕಳೆದ ತಿಂಗಳು ನಿವೃತ್ತರಾದರು. ''ನಿಮ್ಮ ನಿಜವಾದ ಏಜ್ ಏನು ಸಾರ್?'' ಅಂದೆ. 'ಅರವತ್ತೆಂಟೂರೀ' ಅಂದರು. ಧಾರಾಳವಾಗಿ ಎಪ್ಪತ್ತು ವರ್ಷ ಅಂತ ಹೇಳಬಹುದಾದ ವೃದ್ಧಾಪ್ಯದ ಕಳೆ ಅವರ ಮುಖದ ಮೇಲಿತ್ತು. 'ಪರವಾಗಿಲ್ಲವೇ?' ಅಂತ ಆಶ್ಚರ್ಯ ತೋರಿದೆ.

'... ನಮ್ಮೂರಿನಲ್ಲಿ ಸ್ಕೂಲು ಶುರು ಆದಾಗ ಹುಡುಗರು ಇರಲಿಲ್ಲ. ಆಗಲೇ ನಾನು ಕಾಲಿಗೆ ಭಡಾವು ಹಾಕಿಕೊಂಡು ಮೈಮೇಲೆ ಶಲ್ಯ ಹೊದ್ದು ಓಡಾಡುತ್ತಿದ್ದೆ. ಸ್ಕೂಲಿಗೆ ಹುಡುಗರು ಬೇಕು ಅಂತ ನನ್ನನ್ನೂ ಕರಕೊಂಡು ಹೋದರು. ನೇರವಾಗಿ ಏಳನೇ ಕ್ಲಾಸಿಗೆ ಸೇರಿಸಿ ಅವರೇ ಒಂದು ಡೇಟ್ ಆಫ್ ಬರ್ತ್ ಬರೆದರು. ಹಾಗಾಗಿ ಹತ್ತು ವರ್ಷ ಸರ್ವೀಸು ಜಾಸ್ತಿ ಆದಂಗೆ ಆಯಿತು!' ಅಂಥ ವಿವರಿಸಿದರು. ಇಂತಹವರನ್ನು ಕಂಡಾಗ - ಸರ್ಕಾರಕ್ಕೇ ನಾಮ ಹಾಕಿದವರನ್ನ ಕಂಡಾಗ ಖುಷಿ ಆಗೋದಿಲ್ಲವೇ?

ಫಾಲ್ಗಾಟ್ ಕಡೆಯಿಂದ ಬಂದಿರೋರು ನಮ್ಮ ಕಾರ್ಖಾನೆಯವರೇ - ನಮ್ಮ ಮನೆ ಹತ್ತಿರವೇ ಇದ್ದಾರೆ. ಇನ್ನೂ ಸರ್ವೀಸಿನಲ್ಲೇ ಇದ್ದಾರೆ. ಕಳೆದ ತಿಂಗಳ ಅವರ ಮನೆಗೆ ಯಾತಕ್ಕೋ ಹೋಗಿದ್ದೆ. ಇವರು ಕೂರಿಸಿ ಕಾಫಿ ತರ್ತೀನಿ ಅಂತ ಒಳಹೊಕ್ಕರು. ನಮ್ಮ ಸ್ನೇಹಿತರ ಹಾಗೇ ಇರುವ ಮೂರು ನಾಲ್ಕು ಜನ ಕೂತಿದ್ದರು. ಅವರನ್ನ ಮಾತಿಗೆಳೆದೆ 'ನಿಮ್ಮದೆಲ್ಲಿ ಕೆಲಸ?'

'ಕೆಲಸ? ಇಲ್ಲ ಸಾರ್ ರಿಟೈರ್ ಆಗಿ ಎರಡೂವರೆ ವರ್ಷ ಆಯಿತು ಓಎನ್‌ಜಿಸಿ

ನಲ್ಲಿದ್ವಿ' ಅಂದರು ಒಬ್ಬರು. ಮತ್ತಿಬ್ಬರು ಲಿಗ್ನೈಟ್ ಇಂಡಿಯಾದಲ್ಲಿ ಬಾಂಬೆ ಪೋರ್ಟ್‌ನಲ್ಲಿ ಇದ್ದು ರಿಟ್ಟೈರಾದವರಂತೆ. ಈಗ ಇಲ್ಲಿಗೆ ಬಂದಿದ್ದಾರಂತೆ. ಅಷ್ಟರಲ್ಲಿ ಕಾಫಿ ತರುಕ್ಕೆ ಹೋಗಿದ್ದವರು ಕಾಫಿ ತಂದರು. ಪರಿಚಯ ಮಾಡಿಕೊಂಡಿರೋ? ಇವ್ರೆಲ್ಲಾ ನನ್ನ ತಮ್ಮಂದಿರು ಅವನು ಮೊದಲನೇವನು, ಈತ ಎರಡನೇವನು, ಈತ ಮೂರನೇವನು ನಾವು ನಾಲ್ಕು ಜನ ಅಂತ ಪರಿಚಯಿಸಿದರು!

'ಆಗಲೇ ಇವರೆಲ್ಲಾ ರಿಟ್ಟೈರು ಅಂತೆ....' ಎಂಜಲು ನುಂಗಿದೆ. 'ಹೂಂ ಪೆದ್ದ ಮುಂಡೇವು. ಒಂದು ಹತ್ತು ವರ್ಷ ಕಮ್ಮಿ ಕೊಟ್ಟಿದ್ದರೆ ಇನ್ನೂ ಸರ್ವೀಸಿನಲ್ಲೇ ಇರೋವು - ನಾನಿಲ್ಲವೇ ಹಾಗೆ' ಅಂದರು!

ತಲೆಗೆ ಮೀಸೆಗೆ ಎಲ್ಲ ಕಡೆಗೂ ಬಣ್ಣ ಸವರಿ ಬರುವ ನಮ್ಮ ಕಲೀಗು ಪಿಳ್ಳೆ ಅಂತ ಒಬ್ಬ ಇದಾನೆ. 98 ರಲ್ಲಿ ಈತ ನಿವೃತ್ತನಾಗಬೇಕು. ಅವನ ಪ್ರಕಾರ ಡೇಟ್ ಆಫ್ ಬರ್ತ್‌ನ ಅವರಪ್ಪ ಹತ್ತು ವರ್ಷ ಮೊದಲು ಹಾಕಿದ್ದಾರಂತೆ. ಅದರಿಂದ ಈತ ನಲವತ್ತೆಂಟಕ್ಕೇ ರಿಟ್ಟೈರು ಆಗ್ತಿದಾನಂತೆ! ಮೊನ್ನೆ ಮೊನ್ನೆ ಐದನೇ ಪೇಕಮಿಷನ್ ವರದಿ ಬಂತು ನೆನಪಿದೆಯೋ? ಅದರಲ್ಲಿ ನಿವೃತ್ತ ವಯಸ್ಸನ್ನ 60 ವರ್ಷಕ್ಕೆ ಏರಿಸುವ ಯೋಜನೆ ಸರ್ಕಾರದ ಯೋಚನೆಯಲ್ಲಿದೆ ಅಂತ ವರದಿ ಆಗಿತ್ತು ಅದೂ ನೆನಪಿದೆಯೋ?

ಆಗ ಸುಮಾರು ಜನ ನಿವೃತ್ತ ಹೊಸಿಲಲ್ಲಿ ಇದ್ದವರು ಪರವಾಗಿಲ್ಲ ಎರಡು ವರ್ಷ ಜಾಸ್ತಿ ಸರ್ವೀಸು ಸಿಗುತ್ತೆ ಅಂತ ಸಂತೋಷವಾಗಿದ್ದರು. ಆದರೆ ಸರ್ಕಾರ ಈ ನಿವೃತ್ತಿ ವಯಸ್ಸನ್ನು ಹಾಗೇ ಮಡಗಿಕೊಂಡು ಇವರೆಲ್ಲರ ಸಂತೋಷವನ್ನು ಹಾಳುಮಾಡಿತು! ನಿವೃತ್ತರಾದವರೊಬ್ಬರು ತಮಗಾಗಿ ಯಾವುದೋ ಸರಕಾರಿ ಅರ್ಜಿ ತುಂಬಿಸುತ್ತಿದ್ದರಂತೆ. ಅದರಲ್ಲಿ 'ವೃತ್ತಿ' ಎಂಬೋ ಕಾಲಂ ತುಂಬಬೇಕಾಗಿ ಬಂದಾಗ ಕಣ್ಣಲ್ಲಿ ನೀರು ಸುರಿಸುತ್ತಾ ''ವೃತ್ತಿ ನಿವೃತ್ತಿ'' ಅಂತ ಬರೆದರಂತೆ! ಪಾಪ ನಿವೃತ್ತರಾದವರು ಬೇರೆ ಹೊಸದಾರಿ ಹುಡುಕಿ ತಮ್ಮ ಬೇಸರ ಕಳೀಬಾರದೇ ಅನಿಸುತ್ತೆ ಕೆಲವು ನಿವೃತ್ತರು ಪರದಾಡುವುದು ಕಂಡಾಗ!



ಅದಕ್ಕೇ ನಾನು ಬಸ್ ಹತ್ತದೇ,
ಓಡ್ತಾ ಬಂದ್ಬಿಟ್ಟೇಮ್ಮಾ

ಮದುವೆ ಮಾಡ್ತೀರೇನು?

- ಶಿವು

ಮೊನ್ನೆ ಸಂಜೆ ನಾನು ಮನೆಗೆ ಬಂದಾಗ ಮೇಜಿನ ಮೇಲೆ ಒಂದು ಲಕ್ಕೋಟೆ ಕಣ್ಣಿಗೆ ಬಿತ್ತು. ಸುಮಾರು ಎಂಟು ಇಂಚು ಅಗಲ, ಹತ್ತು ಇಂಚು ಉದ್ದದ ಭಾರೀ ಲಕ್ಕೋಟೆ ಅದು. ನಾಲ್ಕು ಮೂಲೆಗಳಿಗೂ ಪಾರಣವಾಗಿ ಕುಂಕುಮ ಹಚ್ಚಿತ್ತು. ಲಕ್ಕೋಟೆಯ ಮೇಲೆ ಇಬ್ಬರು ಹುಡುಗಿಯರು ಅಜಂತ ಉಡುಪು ಧರಿಸಿ, ಇದಿರುಬದಿರಾಗಿ ನಿಂತು ಒಂದು ಕಾಲನ್ನು ವಕ್ರವಾಗಿ ಮಡಿಚಿ ತುತ್ತೂರಿ ಊದುತ್ತಿರುವ ಚಿತ್ರ. ''ಓಹೋ, ಯಾರದ್ದೋ ಮದುವೆ! ಯಾವ್ದೋ ಬಡಪಾಯಿ ಹುಡುಗನಿಗೆ ಕಾದಿದೆ ಗ್ರಹಚಾರ'' ಅಂದ್ಕೊಳ್ತಾನೇ ಲಕ್ಕೋಟೆ ತೆಗೆದು ನೋಡಿದೆ. ಶ್ರೀಮತಿ ಕೌಸಲ್ಯ ಮತ್ತು ಶ್ರೀ ನಾರಾಯಣಮೂರ್ತಿ ಇವರುಗಳ ವಿಜ್ಞಾಪನೆಗಳು ಅಂತ ಶುರು ಆಗಿ ಕೊನೆಗೆ ನಮ್ಮ ಮಗಳ ಲಗ್ನಪತ್ರಿಕೆಗೆ ಬನ್ನಿ ಅಂತ ದಂಪತಿಗಳು ಆದರದಿಂದ ಆಹ್ವಾನ ನೀಡಿದ್ದರು. ಯಾವುದೋ ಪಂಚತಾರಾ ಹೋಟೆಲಿನಲ್ಲಿ ಅದೊಂದು ಸಂಜೆ ಸಮಾರಂಭ. ''ತಂಟೆಗೆ ಸಿಗಬೇಡಾ ತಮ್ಮ, ಸಿಕ್ಕಿದ್ದು ಬಿಡಬೇಡ'' ಅಂಥ ನಮ್ಮಪ್ಪ ನನಗೆ ಯಾವಾಗಲೂ ಬುದ್ಧಿವಾದ ಹೇಳ್ತಾ ಇದ್ರು. ಪಂಚತಾರಾ ಹೋಟೆಲ್ಲಿನ ಊಟದ ಅವಕಾಶ ತಪ್ಪಿಸಿಕೊಳ್ಳುಕ್ಕಾಗುತ್ತದೆಯೇ? ಸರಿ, ಮದುವೆ ಸೀರೆ ಉಟ್ಟ ನನ್ನ ಅರ್ಧಾಂಗೀನ ಸ್ಕೂಟರಿನ ಪಿಲಿಯನ್ ಮೇಲೆ ಪ್ರತಿಷ್ಠಾಪಿಸಿ ಹೊರಟೇಬಿಟ್ಟೆ. ಅಬ್ಬಾ, ಅದೇನು ಅದ್ದೂರಿ ಸಮಾರಂಭ ಅಂತೀರಾ! ಮಿರಮಿರಗುಟ್ಟುವ ಸೀರಿಯಲ್ ದೀಪಗಳು, ಉದ್ದನೆ ಮೇಜುಗಳ ಮೇಲೆ ಜೋಡಿಸಿಟ್ಟ ವೈವಿಧ್ಯಮಯ ಖಾದ್ಯಪದಾರ್ಥಗಳು, ಒಂದು ಅಂಗಡಿ ತೆರೆಯಲು ಸಾಕಾಗುವಷ್ಟು ರೇಷ್ಮೆ ಸೀರೆಗಳನ್ನು ಉಟ್ಟ ಮಹಿಳಾಮಣಿಯರು... ''ಕೇವಲ ಒಂದು ಲಗ್ನ ಪತ್ರಿಕೆಗೆ ಇಷ್ಟೆಲ್ಲಾ ಸಂಭ್ರಮವೇನ್ರೀ! ಇನ್ನು ಮದುವೆ ಹೇಗಿರುತ್ತೋ'' ಅಂತ ನನ್ನ ಪತ್ನಿ ಉದ್ಗಾರ ತೆಗೆದದ್ದೂ ಆಯಿತು. ಹುಡುಗ, ಹುಡುಗಿಯರಿಗೆ ಅಭಿನಂದನೆ ಹೇಳಿ, ಬಿಟ್ಟಿ ಸಿಕ್ಕದ್ದನ್ನು ಹೊಟ್ಟೆಬಿರಿಯ ತಿಂದು ಮನೆಗೆ ಬಂದೆವು. ಇದೆಲ್ಲಾ ನಡೆದು ಒಂದು ವಾರ ಆಗಿಲ್ಲ, ನಾರಾಯಣಸ್ವಾಮಿ ಒಂದು ಸಂಜೆ ಮನೆಗೆ ಬಂದ. ''ಮದುವೆ ತಯಾರಿ ಹೇಗೆ ನಡೆದಿದೆ? ಏನಾದ್ರೂ ಸಹಾಯ ಗಿಹಾಯ ಬೇಕಾದ್ರೆ ಸಂಕೋಚವಿಲ್ದೆ ಹೇಳೋ'' ಅಂತ ಕೇಳಿದೆ. ''ಮದುವೆ ಇದ್ರೆ ತಾನೆ ಸಹಾಯ, ಮದುವೇನೇ ಕ್ಯಾನ್ಸಲ್ ಆಯ್ತು.'' ಅಂದ ನನ್ನ ಸ್ನೇಹಿತ. ನನಗೋ ಷಾಕು. ''ಯಾಕೋ ಏನಾಯ್ತೋ'' ಅಂತ ಬಡಬಡಿಸಿದೆ. ಅವ ಹೇಳಿದ. ''ಎಂಗೇಜ್ಮೆಂಟ್ ಎಲ್ಲಾ ಚೆನ್ನಾಗೇ ಆಯ್ತು ಕಣೋ. ಮಾರನೇದಿನ ರಾಣಿ ತನ್ನ ಫಿಯಾನ್ಸಿ ಜೊತೆ ಡಿನ್ನರ್‌ಗೆ ಹೋಗ್ಬಿಟ್ಟು ಬರ್ತೀನಿ ಅಂತ ಹೇಳಿದ್ಲು. ಸಂತೋಷದಿಂದ ''ಹೋಗ್ಬಿಟ್ಟು ಬಾ'' ಅಂದೆ. ನನ್ನ ಭಾವೀ ಅಳಿಯ ಬಂದು ಅವಳ್ನ ಕರ್ಕೊಂಡು ಹೋದ. ರಾತ್ರಿ ಒಂಭತ್ತು ಘಂಟೆಗೇ ರಾಣಿ ವಾಪಸ್ ಮನೇಗೆ ಬಂದ್ಬಿಟ್ಲು. ''ಯಾಕೆ ಏನಾಯ್ತು?'' ಅಂತ ಕೇಳಿದೆ. ''ಮದುವೆ ಕ್ಯಾನ್ಸಲ್ ಮಾಡ್ಬಿಡಪ್ಪಾ'' ಅಂತ ಸರಾಗವಾಗಿ ಹೇಳಿದ್ಲು. ಪುನಃ

ಗೀತರಹ "ಯಾಕೆ ಏನಾಯ್ತು?" ಅಂತ ಕೇಳೋದ್ಬಿಟ್ರೆ ನನಗಿನ್ನೇನೂ ತೋಚಲಿಲ್ಲ. ರಾಣಿ ಕಾಮಾಗೇ ಇದ್ಲು. "ಅಪ್ಪಾ, ಆ ಪ್ರಾಣೀಗೆ ಸರಿಯಾಗಿ ಡಿನ್ನರ್ ಆರ್ಡರ್ ಮಾಡುಕ್ಕೂ ಬರುಲ್ಲ, ಟೇಬಲ್ ಮ್ಯಾನರ್ಸ್ ಅಂತೂ ಕೇಳಲೇಬೇಡ. ಅವನ ಜೊತೆ ಲೈಫ್ಲಾಂಗ್ ಇರೋದನ್ನ ಊಹಿಸಿಕೊಳ್ಳುಕ್ಕೂ ಸಾಧ್ಯವಿಲ್ಲ ನನ್ನ ಕೈಲಿ. Please do'nt force me" ಅಂದ್ಲು. ಅವರಮ್ಮಾನೂ ಅವಳಕಡೇನೇ ವಹಿಸಿಕೊಂಡು ಮಾತಾಡಿದ್ಲು. ನಾನೂ ಸರಿ ಅಂದೆ. ಅಂತ ಅವ ತನ್ನ ವೃತ್ತಾಂತ ಹೇಳಿಕೊಂಡ.

ಇದನ್ನೆಲ್ಲಾ ಕೇಳಿ ನನಗೆ ಅಷ್ಟೇನೂ ಆಶ್ಚರ್ಯ ಆಗಲಿಲ್ಲ ಅನ್ನಿ. ನಮ್ಮ ಕಾಲದಲ್ಲಿ ಕಂಡು ಕೇಳಿದ ಸಂಗತಿಗಳೆಲ್ಲಾ ಈಗ ಸರ್ವೇಸಾಮಾನ್ಯವಾಗಿಹೋಗಿದೆ. "ಮದುವೆ" ಎಂಬ ಪದಕ್ಕೆ, ಪದಸಮುಚ್ಚಯಕ್ಕೆ, ವಾಕ್ಯಕ್ಕೆ, (sentence for life ಅಂತಾರಲ್ಲಾ ಹಾಗೆ) ನಮ್ಮ ಕಾಲದಲ್ಲಿ ಅದರದ್ದೇ ಆದ ಒಂದು ಮಹತ್ತರವಾದ ಅರ್ಥ ಇತ್ತೇನೋ ಎನ್ನಿಸುತ್ತದೆ. ಐವತ್ತರ ದಶಕದ ಮಾತು. ಆಗತಾನೇ ನಾವೆಲ್ಲಾ ವಿದ್ಯಾಭ್ಯಾಸ ಮುಗಿಸಿ, ಸಿಕ್ಕಕಡೆ ಕೆಲಸ ದಕ್ಕಿಸಿಕೊಂಡು ಸ್ವಂತ ಗಳಿಕೆಯ ಆನಂದವನ್ನು ಅನುಭವಿಸಲು ತೊಡಗಿದ್ದ ಸಮಯ. ಒಂದು ಸಂಜೆ ನನ್ನ ಗೆಳೆಯ ಕೆ.ಟಿ. ನಮ್ಮ ಮನೆಗೆ ಓಡಿ ಬಂದು. ಏದುಸಿರು ಬಿಡುತ್ತಿದ್ದ. ಉತ್ಸಾಹ, ಭಯ, ಆನಂದ, ಆತಂಕ ಎಲ್ಲಾ ಭಾವನೆಗಳೂ ಅವನ ವದನವನ್ನು ಒಟ್ಟಿಗೇ ಆಕ್ರಮಿಸಿದ್ದವು. "ಏನೋ ಸಮಾಚಾರ?" ಅಂತ ಕೇಳಿದೆ. "ನನಗೆ ಮದುವೆ ಫಿಕ್ಸ್ ಆಗಿದೆ. ನಮ್ಮಪ್ಪ ಹೇಳಿದ್ರು, ಜಾತಕಾ ಎಲ್ಲಾ ಸರಿಯಾಗಿದೆಯಂತೆ. ಹುಡುಗಿ ಗ್ರ್ಯಾಜುಯೇಟ್. ನಾನು ಹೋಗಿ ನೋಡೋದೊಂದೇ ಬಾಕಿ. ನೀನೂ ಬರ್ತೀಯೇನೋ ಮೈಸೂರಿಗೆ?" ಅಂತ ಕೇಳಿದ. ಮಾರಲ್ ಸಪೋರ್ಟ್ ಅಂದ್ರೆ ಇದೇ ಅಂದ್ಕೊಂಡು ನಾನೂ ಹೋದೆ ಅನ್ನಿ. ಆ ದಿನಗಳಲ್ಲಿ ನಮಗೆ ಮದುವೆ ಅಂದರೆ ಹುಟ್ಟು, ಸಾವುಗಳಂತೆ, ಪೂರ್ವ ನಿರ್ಧಾರಿತವಾದ, ಬದಲಿಸಲಸಾಧ್ಯವಾದ ಒಂದು ಘಟ್ಟ ಎಂಬ ನಂಬಿಕೆ ಬಲವಾಗಿ ಬೇರೂರಿತ್ತು. ಈ ಘಟ್ಟವನ್ನು ದಾಟುವಾಗ ನಮ್ಮ ಸ್ವಂತ ಅನಿಸಿಕೆಗಳಿಗಿಂತ ನಮ್ಮ ತಂದೆ, ತಾಯಿಯರ ನಿರ್ಧಾರವೇ ಹೆಚ್ಚು ಕ್ಷೇಮಕರ ಎಂಬ ಭಾವನೆ ಬೇರೆ. ಹೆಣ್ಣುಮಕ್ಕಳ ಮದುವೆಯಾದರಂತೂ ಈ ರೀತಿಯ parental decision making ಗೆ ಅತಿ ಮುಖ್ಯ ಪ್ರಾಶಸ್ತ್ಯ. ನನಗಿನ್ನೂ ನೆನಪಿದೆ. ನಮ್ಮಕ್ಕನಿಗೆ ನಮ್ಮಪ್ಪ ಗಂಡು ಹುಡುಕುತ್ತಿದ್ದರು. ನನ್ನ ಭಾವೀ ಭಾವನಿಗೆ ಆಗ ಭಿಲೈನಲ್ಲಿ ಕೆಲಸ. ಒಂದು ವಾರದ ಮಟ್ಟಿಗೆ ರಜ ಹಾಕಿ ಹೆಣ್ಣು ನೋಡಲು ಬೆಂಗಳೂರಿಗೆ ಬಂದಿದ್ದರು. ಅವರು ನಮ್ಮ ಮನೆಗೆ ಬಂದ ದಿನ, ನಮ್ಮ ಚಿಕ್ಕಮ್ಮನ ಮಗಳೂ ಸಹ ದೆಹಲಿಯಿಂದ ರಜೆ ಕಳೆಯಲು ಬೆಂಗಳೂರಿಗೆ ಬಂದು, ನಮ್ಮಲ್ಲಿ ಉಳಿದುಕೊಂಡಿದ್ದಳು. ಬೀಗರೆಲ್ಲಾ ಬಂದು ಹೋದದ್ದಾಯಿತು. ಮನೆಗೆ ಹಿಂತಿರುಗಿದಮೇಲೆ, ನಮ್ಮ ಭಾವನವರನ್ನ ಅವರ ತಂದೆ "ಹುಡುಗಿ ಒಪ್ಪಿಗೆಯಾಯಿತೇನೋ?" ಅಂತ ಕೇಳಿದರಂತೆ. ಅದಕ್ಕೆ ಅವರು "ಒಪ್ಪಿಗೆಯೇನೋ ಆಗಿದೆ. ಆದರೆ ಹುಡುಗಿ ಯಾರು ಅಂತ ಸರಿಯಾಗಿ ತಿಳೀಲಿಲ್ಲ" ಅಂದರಂತೆ. ಮದುವೆಯೇನೋ ಆಯಿತು. ನಮ್ಮ ಭಾವನಿಗೆ ರಜೆ ಇಲ್ಲದ್ದರಿಂದ ಮದುವೆಯ ಮಾರನೆಯ ದಿನವೇ ಊರಿಗೆ ಹೊರಟರು. ಒಂದು ತಿಂಗಳನಂತರ ನಮ್ಮಕ್ಕ ಗಂಡನ

ಮನೆಗೆ ಹೊರಟರು. ಜೊತೆಗೆ ನಮ್ಮ ದೊಡ್ಡಕ್ಕ- ಭಾವ. ಊರು ಸೇರಿದಾಗ ಮಧ್ಯಾನ್ಹ. ಇವರೆಲ್ಲಾ ನೇರವಾಗಿ ಉಕ್ಕಿನ ಕಾರ್ಖಾನೆಗೇ ಹೋದರಂತೆ. ಮನೆ ಬೀಗದ ಕೈ ಬೇಕಲ್ಲಾ. ನಮ್ಮಕ್ಕ ರಿಸೆಪ್ಷನ್‌ಗೆ ಹೋಗಿ ತಮ್ಮ ಪತಿಯನ್ನು ಕರೆಸಬೇಕಾಯಿತು. ನಮ್ಮಕ್ಕನ ಮಾತಿನಲ್ಲೇ ಹೇಳೋದಾದ್ರೆ ''ಅವರಿಗೆ ಹೇಳಿಕಳಿಸಿದ್ದಾಯಿತು. ಯಾರುಯಾರೋ ತರುಣರು ಅಲ್ಲಿ ಓಡಾಡುತ್ತಿದ್ದರು. ನನಗೋ ಇವರ ಮುಖ ಪರಿಚಯವೇ ಮರೆತುಹೋಗಿತ್ತು. ಮದುವೆ ಗಲಾಟೆಯಲ್ಲಿ ಒಂದೆರಡು ಘಳಿಗೆ ಅವರನ್ನು ನೋಡಿದ್ದು ಅಷ್ಟೆ. ದೇವರೇ ಹೇಗೆ ಗುರುತು ಹಿಡಿಯೋದಪ್ಪಾ ಅಂದುಕೊಳ್ಳುತ್ತಾ ಇದ್ದೆ. ಸಧ್ಯ, ಅವರೇ ನನ್ನನ್ನು ಗುರುತಿಸಿ ಬೀಗದ ಕೈ ಕೊಟ್ಟರು. ನಾನು ಬಚಾವಾದೆ'' ಅನ್ನುತ್ತಾರೆ ನಮ್ಮಕ್ಕ.

ಗಂಡು ಹುಡುಕುವುದು ಎಂದಿಗೂ ತಾಪತ್ರಯದ ಕೆಲಸವೇ ಅನ್ನಿ. ಹೆಣ್ಣು ಮಕ್ಕಳು ಮನೆ ಹೊರಗೆ ಹೋಗಿ ಕೆಲಸ ಮಾಡುವ ಪರಿಪಾಠವೇ ಇರದಿದ್ದ ಹಿಂದಿನ ದಿನಗಳಲ್ಲಿ, ಅವರುಗಳಿಗೆ ಮದುವೆ ಮಾಡಿ ಗಂಡನ ಮನೆಗೆ ಸಾಗುಹಾಕುವ ಜವಾಬ್ದಾರಿ ಕನ್ಯಾಪಿತೃಗಳಿಗೆ ಪರ್ವತದಂತಹ ಸಮಸ್ಯೆಯಾಗಿರಬಹುದೇನೋ ಅನ್ನಿಸುತ್ತದೆ. ನಮ್ಮ ದೊಡ್ಡಕ್ಕ ಈ ಕುರಿತು ಮಾತನಾಡುತ್ತಾ ''ಅಪ್ಪಾ ಅಂತೂ ಕಂಡ ಕಂಡ ಹುಡುಗರನ್ನೆಲ್ಲಾ ಮನೆಗೆ ಕರ್ಕೊಂಡುಬಂದು ಉಪ್ಪಿಟ್ಟು ಕೇಸರೀ ಭಾತು ತಿನ್ನಿಸಿ, ನನ್ನ ತೋರಿಸೋರು. ಅವರು ಹೋದಮೇಲೆ, ಏನಂತೀಯಾ ಅಂತ ರಾಗವಾಗಿ ಕೇಳೋರು. ಇಷ್ಟ ಆಗಲಿಲ್ಲ ಅಂದ್ರೆ ಶುರು, ರಾತ್ರೋರಾತ್ರಿ ಉಪದೇಶ. ಗಂಡು ಸಿಗೋದು ಎಷ್ಟು ಕಷ್ಟ, ಓದಿರೋ ಗಂಡೂ ಅಂದ್ರೆ ಇನ್ನೂ ಕಷ್ಟ ಅಂತೆಲ್ಲಾ ಮಾತು. ಕೊನೆಗೆ ನಾನು ಯಾವುದಕ್ಕೂ ಜಗ್ಗದೇ ಇದ್ರೆ, ಹುಣಸೇಹಣ್ಣು ಅನ್ನು ಅಂತ ಹೇಳು ಅಂತ ಹೇಳಿ ''ಹು'' ಅಂದ್ಯಲ್ಲಾ ಅನ್ನುಕ್ಕೂ ಸಿದ್ಧ ಅವರು'' ಅಂತ ತಮಾಷೆ ಮಾಡ್ತಾರೆ.

ಸ್ತ್ರೀಸ್ವಾತಂತ್ರ್ಯ, ವಿಮೆನ್ಸ್ ಲಿಬ್ ಅಂತ ಘೋಷಣೆ ಕೂಗುವ ಈ ದಿನಗಳಲ್ಲಿ ಹುಡುಗ ಹುಡುಗೀರು ತಾವೇ ತಮ್ಮ ತಮ್ಮ ಬಾಳಸಂಗಾತಿಯರನ್ನ ಹುಡುಕಿಕೊಳ್ತಾರೆ, ತಂದೆ ತಾಯೀರಿಗೆ ತಲೆನೋವೇ ಇರೋದಿಲ್ಲ ಅಂತ ತಿಳೀಬೇಡಿ. ವರಾನ್ವೇಷಣೆಯ ಅಗತ್ಯ ಇಂದಿಗೂ ಇದ್ದೇ ಇದೆ. ಎಲ್ಲಾ ಆಧುನಿಕ ಸರ್ವೀಸ್‌ಗಳಂತೆ ಅದೂ ಸಹಾ ಹೈ- ಟೆಕ್ ಆಗಿ ಬದಲಾಗಿದೆ ಅಷ್ಟೆ. ದಿನಪತ್ರಿಕೆಗಳಲ್ಲಿನ ಮ್ಯಾಟ್ರಿಮೋನಿಯಲ್ ಕಾಲಂಗಳಿಂದ ಹಿಡಿದು ವಧೂವರರ ಫೋಟೋ, ಬಯೊಡೇಟಾ, ವಿಡಿಯೋ ಕ್ಲಿಪ್, ಇತ್ಯಾದಿಗಳನ್ನೆಲ್ಲ ಒದಗಿಸುವ ಮ್ಯಾರೇಜ್ ಬ್ಯೂರೋಗಳವರೆಗೂ ಅನೇಕ ಸಂಘ, ಸಂಸ್ಥೆಗಳು ಈ ಪವಿತ್ರ ಕಾರ್ಯವನ್ನು ಮುಂದುವರಿಸಿಕೊಂಡು ಬಂದಿವೆ. ಹುಟ್ಟುವುದಕ್ಕೆ ಮುಂಚೆಯೇ ಬ್ರಹ್ಮ, ಈ ವಧುವಿಗೆ, ಆ ವರ ಅಂತ ಗಂಟು ಹಾಕಿರುತ್ತಾನಂತೆ. ಇಂಗ್ಲೀಷಿನಲ್ಲಿ ""marriages are made in heaven" ಅಂತ ಒಂದು ಹೇಳಿಕೆ ಇದೆ. ""but they are suffered on earth" ಅಂತ ನಮ್ಮಪ್ಪ ಒಂದು ಬಾಲಂಗೋಚಿ ಸೇರಿಸುತ್ತಿದ್ದರು.

ಸಾಂಪ್ರದಾಯಿಕ ವರಾನ್ವೇಷಣೆ, ವಧುಪರೀಕ್ಷೆ ಇವುಗಳ ಜೊತೆಗೆ ಈಚೆಗೆ ಒಂದು ಹೊಸ ಆಯಾಮ ಸೇರಿಕೊಂಡಿದೆ. ಎನ್ನಾರೈ ಸಿಂಡ್ರೋಮ್ ಎಂಬ ಹೆಸರಿನ ಈ ಜಾಡ್ಯ

ಗಂಡಿನ ತಂದೆ ತಾಯಿಯರ behaviour pattrn ಅನ್ನು ಬದಲಿಸಿ ಸಾಕಷ್ಟು ಗೊಂದಲವನ್ನುಂಟು ಮಾಡಿದೆಯಂತೆ. ನನ್ನ ಮಿತ್ರರೊಬ್ಬರು ಇತ್ತೀಚೆಗೆ ಈ ಜಾಡ್ಯಕ್ಕೆ ಬಲಿಯಾಗಿದ್ದರು. ಅವರ ಮಗ ಅಮೆರಿಕೆಯಲ್ಲಿದ್ದಾನೆ. ''ಮುಂದಿನ ಜೂನ್ ತಿಂಗಳಲ್ಲಿ ಇಂಡಿಯಾಗೆ ಬರ್ತೀನಿ. ಮೂರು ನಾಕು ಹುಡುಗೀರ್ನ ಲೈನ್ ಅಪ್ ಮಾಡಿ'' ಅಂತ ತಂದೇಗೆ ಬರೆದಿದ್ದ. ಹುಡುಗೀರೇನೋ ಬೇಕಾದಷ್ಟಿದ್ದರು. ಆದರೆ ಅವರೆಲ್ಲಾ ಜೂನ್‌ವರೆಗೂ ಕಾಯೋಹಾಗೆ ಮಾಡಬೇಕಲ್ಲಾ. ಸರಿ, ಇದ್ದದ್ದರಲ್ಲಿ ಉತ್ತಮವಾಗಿದ್ದ ನಾಲ್ಕು ಹುಡುಗೀರನ್ನ ಆರಿಸಿ, ಒಬ್ಬೊಬ್ಬರ ಮನೆಗೂ ಯಾತ್ರೆ ಹೊರಟರು. ಎಲ್ಲರಿಗೂ ಒಂದೇ ಪ್ಲೇಟು. ''ನಮ್ಮ ಹುಡುಗ ನಿಮ್ಮ ಮಗಳ ಫೋಟೋ ನೋಡಿ ಅವಳನ್ನೇ ಮಾಡ್ಕೋತೀನಿ ಅಂತ ಹಠ ಹಿಡಿದಿದ್ದಾನೆ. ಜಾತಕ ದಿವಿನಾಗಿ ಕೂಡತ್ತೆ. ಜೂನ್‌ನಲ್ಲಿ ಅವನು ಬಂದ ತಕ್ಷಣ ನಿಮ್ಮ ಹುಡುಗಿ ಅವನನ್ನ ನೋಡಲಿ. ಅವಳು ಒಪ್ಪಿದ್ರೆ ವಾಲಗ ಊದಿಸಿಬಿಡೋಣ. ಏನಂತೀರಿ?'' ಪಾಪ, ಕನ್ಯಾಪಿತೃಗಳು ಏನಂತಾರೆ? ''ಖಂಡಿತವಾಗಿ ಹಾಗೇ ಆಗ್಩ೀಸ್ವಾಮಿ. ಇನ್ನು ನಾಲ್ಕು ತಿಂಗಳು ತಾನೇ ಆಡಾದ್ದಾಗೆ ಬಂದ್ಬೋಗತ್ತೆ'' ಅಂತ ಮನಸ್ಸಿನಲ್ಲೇ ಮಂಡಿಗೆ ಮೆಲ್ಲುತ್ತಾ, ಬೇರೆ ಯಾವ ಗಂಡಿಗೂ ಖಚಿತವಾಗಿ ಉತ್ತರ ಕೊಡದೇ ಕೂತಿದ್ರು. ಜೂನ್‌ನಲ್ಲಿ ಮಗ ಮಹರಾಯ ಬಂದೇ ಬಂದ. ಯಾವ ಹುಡುಗೀನೂ ಒಪ್ಪದೇ ಹೊರಟೇ ಹೋದ. ಗಂಡಿನ ತಂದೆ ಕನ್ಯಾ ಪಿತೃಗಳಿಗೆ ಸಬೂಬು ಹೇಳುಕ್ಕೆ ಶುರು. ''ನಿಮ್ಮ ಮನೆಯಿಂದ ಹಿಂದಕ್ಕೆ ಬರ್ತಾನೇ ಬೆಕ್ಕು ಅಡ್ಡ ಬಂತು. ಶಕುನ ಸರಿಹೋಗಲಿಲ್ಲ ಅಂತಲೋ, ಇನ್ನೇನೋ ಕುಂಟು ನೆವ ಹೇಳಿ ಬಚಾವಾದರಂತೆ.

ನಿಜವಾದ ಜ್ಯೋತಿಷ್ಯ ನಂಬಿ ಜಾತಕ ನೋಡೋರು ಒಂದು ಪಾಲಾದರೆ, ಸರಿಹೋಗದ ಹೆಣ್ಣನ್ನು ನಿರಾಕರಿಸಲು ಜಾತಕದ ಮೊರೆಹೋಗುವವರು ಹತ್ತುಪಾಲು. ''ನಮಗಂತೂ ನಿಮ್ಮ ಸಂಬಂಧ ಬಹಳ ಇಷ್ಟ ಇತ್ತು ನೋಡಿ. ಆದರೆ ಈ ಜಾತಕ ಅಂತ ಒಂದಿದೆಯಲ್ಲಾ. ನಾಳೆ ಮಕ್ಕಳಿಗೆ ತೊಂದರೆ ಆಗಬಾರದಲ್ವೇ.'' ಅನ್ನೋದು ಈಚೆಗೆ ಸ್ಟಾಂಡರ್ಡ್ ಸಬೂಬು ಆಗಿಹೋಗಿದೆ. ಇದೆಲ್ಲಾ ರಗಳೇನೇ ಬೇಡ, ಈ arranged marriage ಪಣೇಬರಹಾನೇ ಇಷ್ಟು. ನಮ್ಮ ಮಗಳು love marriage ಮಾಡ್ಕೊಂಡು ಹಾಯಾಗಿರ್ಲಿ ಅಂತಾರೆ ಹಲವು ಕನ್ಯಾಪಿತೃಗಳು. ''ಆಫೀಸ್ನಲ್ಲಿ ಯಾರೂ ಇಲ್ಲವೇನೇ? ಸ್ವಲ್ಪ ನೀಟಾಗಿ ಡ್ರೆಸ್ ಮಾಡ್ಕೊಂಡು ಹೋಗ್ಬಾರ್ದೇ?'' ಅಂತ ಈ ಗುಂಪಿನ ಕೊರಗು.

ಹಿಂದಿನ ಕಾಲದಲ್ಲಿ ರಾಜ, ಮಹಾರಾಜರುಗಳಿಗಿದ್ದ ಸಮಸ್ಯೇನೇ ಬೇರೆ ರೀತಿಯದ್ದು. ''ಮಹಾ ಪ್ರಭೋ ನೆರೆ ರಾಜ್ಯದ ಸೈನ್ಯ ನಮ್ಮ ಕೋಟೆಗೆ ಮುತ್ತಿಗೆ ಹಾಕಿದೆ. ಅವರ ಸಂಖ್ಯೆ ನಮ್ಮ ಮೂರರಷ್ಟಿದೆ. ಕೋಟೆ ಒಳಗಿನ ಆಹಾರ ಧಾನ್ಯ ಎಲ್ಲಾ ಮುಗಿಯುತ್ತಾ ಬಂದಿದೆ. ನಮ್ಮ ಸೈನಿಕರೆಲ್ಲಾ ಕಂಗೆಟ್ಟಿದ್ದಾರೆ. ನನಗೆ ಏನೂ ತೋಚುತ್ತಿಲ್ಲ'' ಅಂತ ಮಂತ್ರಿ ಗಾಬರಿಯಿಂದ ರಾಜನಿಗೆ ಹೇಳಿದರೆ, ರಾಜ,

''ಏನೂ ಯೋಚನೆ ಮಾಡಬೇಡಿ ಮಂತ್ರಿವರ್ಯ. ಆ ಶತ್ರುರಾಜನಿಗೆ ರಾಜಕುವರಿ ಇದ್ದಾಳಷ್ಟೆ. ಆಕೆಯನ್ನು ನಾವು ಪರಿಗ್ರಹಿಸಲು ಒಪ್ಪಿರುವುದಾಗಿ ಒಂದು ರಾಯಸವನ್ನು ಬರೆಸಿ ಕಳಿಸಿ'' ಅಂತ ಹೇಳಿ ಪುನಃ ರಾಜ ತನ್ನ ಚದುರಂಗದಾಟದಲ್ಲಿ ಮಗ್ನನಾಗುತ್ತಿದ್ದ.

ಮದುವೆಯಾದ ನಂತರ, ರಾಜಕುವರಿ ತನ್ನ ತಾಯಿಯೊಂದಿಗೆ ಬಂದಿಳಿದಮೇಲೆ, ರಾಜ, ''ನಮ್ಮ ಅತ್ತೆಯ ಕಾಟವನ್ನು ತಡೆಯಲಾರೆವು. ಪುನಃ ಮುತ್ತಿಗೆಯನ್ನೇ ಆರಿಸಲಾದೀತೆ?'' ಎಂದು ಕೇಳಿದನಂತೆ. ನಮ್ಮ ದೇಶದಲ್ಲೇ ಅಂತ ಕಾಣುತ್ತೆ, ಮದುವೆ ಬಗ್ಗೆ ಇಷ್ಟೆಲ್ಲಾ ತಲೆಬಿಸಿ ಮಾಡಿಕೊಳ್ಳೋದು. ಅಮೆರಿಕಾ, ಯೂರೋಪುಗಳಲ್ಲಿ ಮದುವೆ, ವಿವಾಹ ವಿಚ್ಛೇದನ ಇವೆಲ್ಲಾ ಅಲ್ಲಿನ ಜನಗಳಿಗೆ ನೀರುಕುಡಿದಹಾಗೆ. ಅಲ್ಲೀ ಸಂಸ್ಕೃತಿ ಈಚೆಗೆ ನಮ್ಮ ದೇಶಕ್ಕೂ ಹರಡುತ್ತಾ ಇರೋದು, ಎಲ್ಲರಿಗೂ ತಿಳಿದಿರೋ ವಿಷಯಾನೇ ಅನ್ನಿ. ಅಮೇರಿಕನ್ ತಾರೆಯರ ಜೀವನ ಶೈಲಿ ಇನ್ನೊಂದು ದಶಕದಲ್ಲಿ ನಮ್ಮ ಶೈಲಜ, ಶೀಲ; ಇವರುಗಳ ದಿನಚರಿಯಾದರೆ, ನನಗಂತೂ ಆಶ್ಚರ್ಯವೇನಿಲ್ಲ. ಆಗ ಸಂಭವಿಸಬಹುದಾದ ಕೆಲವು ಘಟನಾವಳಿಗಳನ್ನ ಊಹಾಪ್ರಪಂಚದಿಂದ ಬಿಡಿಸಿದರೆ, ಬಹುಶಃ ಹೀಗಿರಬಹುದಲ್ಲವೇ. ''ನೀವು ಪ್ರೇಮ ಮಾಡೋವಾಗ ನಿಮ್ಮ ಗಂಡನ ಜೊತೆ ಮಾತಾಡ್ತೀರಾ ಶೈಲಜಾ?'' ಅಂತ ಕೇಳಿದ್ರೆ ಆ ಮಹರಾಯ್ತಿ ''ಮೊದಲು ಆಗ್ತಾ ಇರ್ಲಿಲ್ಲ. ಈಗ ಸೆಲ್ಯುಲಾರ್ ಫೋನ್ ಇರೋದ್ರಿಂದ ಏನೂ ಕಷ್ಟ ಇಲ್ಲ'' ಅಂದಳಂತೆ. ಅದೊಂದು ಕೋರ್ಟ್ ಸೀನ್. ಒಬ್ಬ ಮಹಿಳೆ ಜಡ್ಜ್ ಹತ್ರ ನನಗೆ ಡೈವೋರ್ಸ್ ಬೇಕು ಅಂತ ಬೇಡ್ಕೊಳ್ತಾ ಇದ್ಲು. ''ನೋಡಿ, ಮಹಾಸ್ವಾಮಿ, ನನ್ನ ಗಂಡ, ಮಹಾ ಧೂರ್ತ. ದಿನಾ ಬೆಳಗಾಗೆದ್ರೆ ಮುಖ ವಾಷ್ ಮಾಡ್ಕೋ ಅಂತ ಬಲವಂತ ಮಾಡ್ತಾನೆ...'' ''ಅಯ್ಯೋ ಅದ್ರಲ್ಲೇನಮ್ಮಾ ತಪ್ಪೂ, ಯಾವಾಗ್ಲೂ ಶುಭ್ರವಾಗಿರೋದು ಆರೋಗ್ಯಕ್ಕೆ ಒಳ್ಳೇದಲ್ವೇ'' ಅಂತ ಜಡ್ಜ್ ಹೇಳ್ದಾಗ ''ಸ್ವಾಮೀ, ನೀವು ಪೂರ್ತಿ ಕೇಳಿಸ್ಕೊಳ್ಳಲೇ ಇಲ್ಲ. ವಾಷ್ ಮಾಡ್ಕೊಂಡಮೇಲೆ, ಸರಿ ಈಗ ಐರನ್ ಮಾಡ್ತೀನಿ ಅಂತ ಮೇಲೇ ಬರ್ತಾನೆ'' ಅಂತ ಗೋಳಾಡ್ಕೊಂಡ್ಲಂತೆ ಆ ಬಡಪಾಯಿ.

''ಏನ್ರೀ ಶೀಲಾ ಕಣ್ಣಿನ ಸುತ್ತಾ ಎಲ್ಲಾ ಕಪ್ಪಗಿದೆ? ಯಾರು ಹೊಡೆದದ್ದೂ?'' ಅಂತ ಸಹಾನುಭೂತಿಯಿಂದ ಕೇಳಿದ್ರೆ ಆ ಶೀಲಮ್ಮ ''ನನ್ನ ಗಂಡಾನೇರೀ ಇದಕ್ಕೆ ಕಾರಣ'' ಅಂದ್ರಂತೆ. ''ನಿಮ್ಮ ಗಂಡಾನೇ? ಬೊಂಬಾಯಿಗೆ ಹೋಗಿರ್ಲಿಲ್ವೇ ಅವ್ರು?'' ಅಂತ ಕೇಳಿದ್ದಕ್ಕೆ, ಶೀಲಮ್ಮ ''ನಾನೂ ಹಾಗೇ ಅಂದ್ಕೊಂಡಿದ್ದೇರೀ'' ಅಂದ್ಬಿಡೋದೇ.

ಮೊನ್ನೆ ನಮ್ಮಕ್ಕನ ಮಗಳು ರಾಧಾ ಮನೆಗೆ ಬಂದಿದ್ದಳು. ಮಾತು ಮದುವೆ, ಕಷ್ಟ ಕಾರ್ಪಣ್ಯ ಇವುಗಳ ಕಡೆ ತಿರುಗಿತು. 'ಗೊತ್ತಿದ್ದೂ ಗೊತ್ತಿದ್ದೂ ಜನ ಯಾಕೆ ಮದುವೆ ಅನ್ನೋ ಹಳ್ಳಕ್ಕೆ ಬೀಳ್ತಾರೆ, ಮಾವ? ಯಾವುದೋ ಹುಡುಗಿ, ಯಾವುದೋ ಹುಡುಗ, entirely different personalities, ಅಂಥಾ ಪರಿಸ್ಥಿತೀಲಿ ಅವರ ಮದುವೆ ಗುಲಾಬಿ ಹಾಸಿಗೆ ಇರ್ಲೀ, ಮುಳ್ಳಿನ ಮಂಚ ಆಗೋಲ್ಲಾ ಅಂತ ಏನು ಗ್ಯಾರಂಟಿ ಮಾವ?'' ಅಂತ ಕೇಳಿದಳು.

''ಅದೇ ಕಣಮ್ಮ ಮಾಯೆ. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳೋದರಲ್ಲೇ ಇರೋದು ಸ್ವಾರಸ್ಯ'' ಅಂತ ನಾಲ್ಕಾಣೆ ಫಿಲಾಸಫಿ ಹೇಳಿದೆ.

'ಮದುವೆ ultimate purpose ಏನು, ಮಾವ?'' ಅಂತ ಕೇಳಿದಳು ರಾಧಾ.

''ಆತ್ಮದ ಉನ್ನತಿ ಕಣಮ್ಮ, evolution of the soul." ಅಂದೆ.

ಆಕಾಶವಾಣಿ ಕೃಪೆಯಿಂದ



ನಾನೇ ಸೀನಿಯರ್ ಲಾಯರ್ ಯುವರ್ ಆನರ್, ಕೇಸ್ ಶುರು ಆದಾಗ
ಜೂನಿಯರ್ ಆಗಿದ್ದೆ ಅಷ್ಟೇ!

ಹಾಸ್ಯ ಪ್ರಿಯರೇ,

ಇದೀಗ ಹಾಸ್ಯೋತ್ಸವ '97 ರ ಕಾರ್ಯಕ್ರಮ ಪ್ರೊ|| ಅ. ರಾ. ಮಿತ್ರ ಅವರ ಉಸ್ತುವಾರಿಯಲ್ಲಿ ಸಿದ್ಧವಿದೆ.

ಮಾಸ್ಟರ್ ಹಿರಣ್ಣಯ್ಯ, ಬಿ. ಎಸ್. ಕೇಶವ ರಾವ್, ಬಿ. ಆರ್. ಜಯರಾಮ್, ಭಾರತಿ ಕಾಸರಗೋಡು, ಡಾ|| ಎಸ್. ಆರ್. ಲೀಲಾ ಇವರುಗಳಿಂದ ಕೈಲಾಸಂ ಸ್ಮರಣೆ.

ಡಾ|| ಎಚ್. ಕೆ. ರಂಗನಾಥ್ ಅವರಿಂದ ನಾ. ಕಸ್ತೂರಿ ಜನ್ಮಶತಾಬ್ಧಿ ಸಮಾರೋಪ ಉಪನ್ಯಾಸ

ಡಾ|| ಎಚ್. ನರಸಿಂಹಯ್ಯ ಅವರಿಂದ ಕೈಲಾಸಂ ನೆನಪುಗಳು

ಸಿ. ಆರ್. ಸಿಂಹ ಮತ್ತು ಎ. ಎಸ್. ಮೂರ್ತಿ ಅವರಿಂದ ಎಸೆನ್ಸ್ ಆಫ್ ಕೈಲಾಸಂ.

ಗಾನವಿನೋದಿನಿ ತಂಡದವರಿಂದ ಕೈಲಾಸಂ ಗೀತೆಗಳು ಮತ್ತು ಅಣಕವಾಡು

ಹಲವಾರು ಹಾಸ್ಯ ಪುಸ್ತಕಗಳ ಬಿಡುಗಡೆ : ಎನ್. ರಾಮಾನುಜ ಅವರಿಂದ


ಮತ್ತಿತರ ಕಾರ್ಯಕ್ರಮಗಳು......... !

ಕಾರ್ಯಕ್ರಮ: ಬೆಳಿಗ್ಗೆ 10.30ರಿಂದ ಸಂಜೆ 5.30 ರ ವರೆಗೆ

ತಮ್ಮ ಆಗಮನವನ್ನು ಎದುರು ನೋಡುವ

ಹಾಸ್ಯ ಬ್ರಹ್ಮ ಮತ್ತು ಅಪರಂಜಿ ವೇದಿಕೆ ಪರವಾಗಿ

ಕೃಷ್ಣ ಸುಬ್ಬರಾವ್ ಎಂ. ಶಿವಕುಮಾರ್



Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.